ಭಾರತದ ಸಂವಿಧಾನ, ಪ್ರಜಾಪ್ರಭುತ್ವ, ಅಹಿಂಸೆ, ಜಾತ್ಯತೀತತೆ ಮತ್ತು ಪಾರದರ್ಶಕತೆಯಲ್ಲಿ ನಂಬಿಕೆ ಮತ್ತು ಬದ್ಧತೆ ಇರುವ ವ್ಯಕ್ತಿ ಮತ್ತು ಸಂಸ್ಥೆ, ಸಂಘಟನೆಗಳಿಗೆ ಪ್ರಜಾಧಿಕಾರ ವೇದಿಕೆ - ಕರ್ನಾಟಕವು ಬಡಜನರ ಬದುಕಿನ ಹಕ್ಕುಗಳಿಗಾಗಿ ಹಕ್ಕೊತ್ತಾಯದ ಈ ಆಂದೋಲನದಲ್ಲಿ ಕೈಜೋಡಿಸಬೇಕೆಂದು ಹೃತ್ಪೂರ್ವಕವಾಗಿ ಕರೆ ನೀಡುತ್ತದೆ.

ಪ್ರಜಾಧಿಕಾರ ವೇದಿಕೆಯ ವಿಳಾಸ :

ನಾಗರಿಕ ಸೇವಾ ಟ್ರಸ್ಟ್ ಕಛೇರಿ, ಅಂಚೆ: ಗುರುಪಾಯನಕೆರೆ -574217(ದ.ಕ.ಜಿಲ್ಲೆ.) ಫೋನ್:08256-232019
ಬೆಂಗಳೂರು ಸಂಪರ್ಕ:ಶ್ರೀ ವೈ.ಬಿ.ರಾಮಕೃಷ್ಣ, mob: 9448053914, ಶ್ರೀ ಶಿವರಾಜೇ ಗೌಡ mob: 9448733838

ಪ್ರಜಾಧಿಕಾರ ವೇದಿಕೆ - ಕರ್ನಾಟಕ

ರಾಜ್ಯ ಮಟ್ಟದ ಹಕ್ಕೊತ್ತಾಯ ಸಮಾವೇಶ:

ತಾ. 6 ಆಗಸ್ಟ್ 2007ರಂದು ಬೆಂಗಳೂರಿನಲ್ಲಿ ಕೃಷಿಕರ, ಕಾರ್ಮಿಕರ, ಬಡವರ, ದಲಿತರ, ಮಹಿಳೆಯರ, ಗಿರಿಜನರ ಒಟ್ಟಾರೆ ಶೋಷಿತರ ಬದುಕಿನ ಹಕ್ಕುಗಳಿಗಾಗಿ ರಾಜ್ಯ ಮಟ್ಟದ ಹಕ್ಕೊತ್ತಾಯ ಸಮಾವೇಶವನ್ನು ಆಯೋಜಿಸಲಾಗಿದೆ. ಕಳೆದ 3 ತಿಂಗಳುಗಳಿಂದ ರಾಜ್ಯಮಟ್ಟದ ಹಲವಾರು ಸಭೆಗಳು ಮತ್ತು ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಈ ಬಗೆಗಿನ ಜಾಗೃತಿ ಮತ್ತು ಸಂಘಟನಾ ಸಭೆಗಳನ್ನು ನಡೆಸಿ ಸರಕಾರ, ಮಂತ್ರಿಗಳು ಮತ್ತು ರಾಜಕೀಯ ಪಕ್ಷಗಳ ರಾಜ್ಯಾಧ್ಯಕ್ಷರುಗಳು ಇವರನ್ನೆಲ್ಲಾ ಸಂಪರ್ಕಿಸಿ ಸಮಾಲೋಚಿಸಿ ಈ ಅತ್ಯಂತ ಮಹತ್ವದ ಸಮಾವೇಶವನ್ನು ಸಂಘಟಿಸಲಾಗಿದೆ.

ಸಮಾವೇಶಕ್ಕೆ ಮುಖ್ಯ ಅತಿಥಿಗಳಾಗಿ ಉಪ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ, ಗೃಹ ಮಂತ್ರಿ ಶ್ರೀ ಎಂ.ಪಿ.ಪ್ರಕಾಶ್ ಮತ್ತು ವಿರೋಧ ಪಕ್ಷದ ನಾಯಕ ಶ್ರೀ ಧರಂ ಸಿಂಗ್ ಬರಲಿದ್ದಾರೆ. ನಮ್ಮ ಕೃಷಿ ಮತ್ತು ಕೃಷಿಕರ ಹಿತರಕ್ಷಣೆಗಾಗಿ ನಿರಂತರವಾಗಿ ದುಡಿಯುತ್ತಲಿರುವ ಡಾ| ದೇವಿಂದರ್ ಶರ್ಮಾ ಉದ್ಘಾಟನೆಯ ಭಾಷಣ ಮಾಡಲಿದ್ದಾರೆ.

ಪ್ರಜಾಧಿಕಾರ ವೇದಿಕೆಯು ರಾಜ್ಯ ಮತ್ತು ಜಿಲ್ಲಾಮಟ್ಟದ ಹಲವಾರು ಸಮಾಲೋಚನೆಗಳನ್ನು ನಡೆಸಿ ಅಂಚಿಗೆ ತಳ್ಳಲಾದ, ಶೋಷಿತ ಬಡಜನರ ವಿವಿಧ ಸಮುದಾಯಗಳ ಪ್ರಮುಖ ಸಮಸ್ಯೆಗಳ ಪಟ್ಟಿಯನ್ನು ಸಿದ್ಧಗೊಳಿಸಿದೆ. ಜೀವನಾಧಾರದ ಈ ಮಹತ್ವದ ಪ್ರಶ್ನೆಗಳಿಗೆ ಸರಕಾರ, ಮಂತ್ರಿಗಳು, ಜನಪ್ರತಿನಿಧಿಗಳು ಮತ್ತು ಎಲ್ಲಾ ರಾಜಕೀಯ ಪಕ್ಷಗಳು ಸೂಕ್ತ ಗಮನ ಹರಿಸುವಂತಾಗಬೇಕು; ನೀತಿ, ಧೋರಣೆ, ಕಾನೂನುಗಳು ಜನಪರವಾಗುವಂತೆ ಪ್ರಯತ್ನಿಸುವಂತಾಗಬೇಕೆಂಬ ಉದ್ದೇಶದಿಂದ ಎಲ್ಲ ರಾಜಕೀಯ ಪಕ್ಷಗಳ ರಾಜ್ಯಾಧ್ಯಕ್ಷರನ್ನು ಸಮಾವೇಶಕ್ಕೆ ಆಹ್ವಾನಿಸಲಾಗಿದೆ. ಸಮಾವೇಶದ ಉದ್ಘಾಟನಾ ಕಾರ್ಯಕ್ರಮದ ನಂತರ ಜನರ ಹಕ್ಕೊತ್ತಾಯಗಳಿಗೆ ರಾಜಕೀಯ ಪಕ್ಷಗಳು ತಮ್ಮ ನಿಲುವನ್ನು ಪ್ರಕಟಿಸುವ ಕಾರ್ಯಕ್ರಮವನ್ನು ರೂಪಿಸಲಾಗಿದೆ. ರಾಜ್ಯದ ಪ್ರಮುಖ ರೈತ ಸಂಘಟನೆಗಳೂ ರೈತಪರ ನೀತಿ - ಯೋಜನೆಗಳ ಕುರಿತು ಅಭಿಪ್ರಾಯ - ಬೇಂಬಲ ವ್ಯಕ್ತಪಡಿಸಲಿದ್ದಾರೆ.

ಸರಕಾರ ಮತ್ತು ರಾಜಕೀಯ ಪಕ್ಷಗಳ ನೀತಿ, ಧೋರಣೆ ಮತ್ತು ಕಾನೂನುಗಳು, ಯೋಜನೆಗಳು, ಸಣ್ಣ ರೈತರು, ಕೃಷಿಕಾರ್ಮಿಕರು, ದಲಿತರು, ಆದಿವಾಸಿಗಳು, ಮಹಿಳೆಯರು, ಮೀನುಗಾರರು, ನೇಕಾರರು, ಕೊಳಚೆ ನಿವಾಸಿಗಳು, ಬೀದಿ ಕಾರ್ಮಿಕರು, ಒಟ್ಟಾರೆ ಬಡಜನರ ಪರವಾಗಿರಲು ಆಗ್ರಹಿಸುವುದೇ ಈ ಸಮಾವೇಶದ ಮುಖ್ಯ ಉದ್ದೇಶ.

ಕರ್ನಾಟಕ ರಾಜ್ಯದ ಎಲ್ಲಾ 27 ಜಿಲ್ಲೆಗಳಿಂದ 250ಕ್ಕೂ ಹೆಚ್ಚು ಸ್ವಯಂಸೇವಾ ಸಂಸ್ಥೆಗಳು, ಜನ ಸಂಘಟನೆಗಳು ಮತ್ತು ಚಳುವಳಿಗಳ ಲಕ್ಷಾಂತರ ಸದಸ್ಯರ ಪರವಾಗಿ 1200 ಅಧಿಕೃತ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ಹಕ್ಕೊತ್ತಾಯ ಸಮಾವೇಶದಲ್ಲಿ ಸರಕಾರ ಮತ್ತು ರಾಜಕೀಯ ಪಕ್ಷಗಳು ಈ ಕೆಳಗಿನ ಪ್ರಮುಖ ಹಕ್ಕೊತ್ತಾಯಗಳಿಗೆ ಸ್ಪಂದಿಸಬೇಕಿದೆ:

1) ಗ್ರಾಮ ಪಂಚಾಯತ್‌ಗಳಿಗೆ ನೀಡಿರುವ ಅಧಿಕಾರ ಮೊಟಕುಗೊಳಿಸಬಾರದು. ಪಂಚಾಯತ್‌ರಾಜ್ ವ್ಯವಸ್ಥೆಗೆ ಹೆಚ್ಚಿನ ಅಧಿಕಾರ ನೀಡುವ ವಿಕೇಂದ್ರೀಕರಣ ನೀತಿಯನ್ನು ಜಾರಿಗೊಳಿಸಬೇಕು. ಶಾಸಕರು, ಸಂಸದರು, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್-ಇವರ ಅನುದಾನಗಳೂ ಜಮಾಬಂದಿಗೆ ಒಳಪಡಬೇಕು, ಆಡಳಿತದಲ್ಲಿ ಭ್ರಷ್ಟಾಚಾರ ತಡೆಯಲು ಜಿಲ್ಲಾ,ತಾಲೂಕು,ಗ್ರಾಮ ಮಟ್ಟದಲ್ಲಿ ಕಾವಲು ಸಮಿತಿ ರಚಿಸಬೇಕು.

2) ಸಣ್ಣ ಹಾಗೂ ಅತಿಸಣ್ಣ ಕೃಷಿಕರು ಮತ್ತು ಕೃಷಿ ಕಾರ್ಮಿಕರಿಗೆ 'ಡಿ'ವರ್ಗದ ನೌಕರರಿಗೆ ದೊರೆಯುವ ಸಂಬಳಕ್ಕೆ ಸಮಾನವಾದ ನಿಶ್ಚಿತ ಆದಾಯ ದೊರೆಯುವ ವ್ಯವಸ್ಥೆ ಆಗಬೇಕು. 6 ನೇ ವೇತನ ಆಯೋಗದ ವರದಿಯಲ್ಲಿ ಈ ಬೇಡಿಕೆ ಸರ್ಜಾಡಿಯಾಗಬೇಕು.

3) ರಾಜ್ಯದ 9 ಲಕ್ಷ ಬೀಡಿ ಕಾರ್ಮಿಕರಿಗೆ ಸರಕಾರದ ಆದೇಶದ ಪ್ರಕಾರ ವೇತನ, ತುಟ್ಟಿಭತ್ತೆ ಮತ್ತು ಹಿಂದಿನ ಬಾಕಿ ತುಟ್ಟಿಭತ್ತೆ ಅಂಶ (ರೂ.4500/-) ಸಿಗಬೇಕು. ಹಾಗೂ ಬೀಡಿ ಕಾರ್ಮಿಕರಿಗೆ ಮನೆ, ಆಸ್ಪತ್ರೆ ಸೌಲಭ್ಯ ಮತ್ತು ಎಲ್ಲಾ ಮಕ್ಕಳಿಗೆ ಸ್ಕಾಲರ್‌ಶಿಪ್, ಎಲ್ಲರಿಗೂ ಲಾಗ್ ಪುಸ್ತಕ ಸಿಗಬೇಕು. ISEC ವರದಿ ಮಾನ್ಯ ಮಾಡಬೇಕು. ನೇಕಾರರಿಗೂ ಇದೇ ಪ್ರಕಾರ ಬದುಕಿಗೆ ಭದ್ರತೆ ನೀಡಬೇಕು.

4) ಕೃಷಿ ವಿರೋಧಿ ಬೀಜ ಮಸೂದೆ ಮತ್ತು ಕೃಷಿ ನೀತಿ, ನೀರಿನ ಖಾಸಗೀಕರಣ, ಎಪಿಎಂಸಿ ತಿದ್ದುಪಡಿ, ವಿಶೇಷ ಆರ್ಥಿಕ ವಲಯಗಳಿಗೆ ಕೃಷಿಭೂಮಿ ಸ್ವಾಧೀನತೆಗಳಿಂದ ಕೃಷಿಕರಿಗೆ ಅಪಾರ ಹಾನಿಯಾಗುತ್ತದೆ. ಇವುಗಳನ್ನು ಕೈಬಿಟ್ಟು ಕೃಷಿಪರ ನೀತಿ, ಕಾಯ್ದೆ, ಯೋಜನೆ ರೂಪಿಸಬೇಕು. ರೈತರ ಆತ್ಮಹತ್ಯೆ ತಡೆಗೆ ಪರಿಣಾಮಕಾರಿ ಯೋಜನೆ ರೂಪಿಸಬೇಕು. ಈ ಎಲ್ಲಾ ವಿಷಯಗಳಲ್ಲಿ ಡಾ| ದೇವಿಂದರ್ ಶರ್ಮಾರ ತಿಪ್ಪಾರಸುಗಳನ್ನು ಗಂಭೀರವಾಗಿ ಪರಿಗಣಿಸಬೇಕು.

5) ಪಡಿತರ ಚೀಟಿ ಎಲ್ಲಾ ಬಡವರಿಗೆ ಸಿಗುವಂತೆ ಮತ್ತು ಪಡಿತರ ಆಹಾರ ಸಮರ್ಪಕವಾಗಿ ಸಿಗುವಂತೆ ಮಾಡಬೇಕು. ಬಡತನ ಗುರುತಿಸಲು ವಾರ್ಷಿಕ ಆದಾಯ ಮಿತಿ ರೂ.50000/-ಕ್ಕೆ ಏರಿಸಬೇಕು. ಪ್ರತಿ ಕುಟುಂಬಕ್ಕೆ ಕನಿಷ್ಠ 20 ಕೆಜಿ. ಗರಿಷ್ಠ 30 ಕೆಜಿ. ಅಕ್ಕಿ , ಗೋಧಿ ನೀಡಬೇಕು. ಗ್ಯಾಸ್ ಸೌಲಭ್ಯ ಇರುವವರಿಗೂ ಕನಿಷ್ಠ 2 ಲೀಟರ್ ಸೀಮೆ ಎಣ್ಣೆ ಕೊಡಬೇಕು. ರೈತರಿಗೆ ಪಂಪ್ ಬಾಗ್ಗೆ ರಿಯಾಯ್ತಿ ದರದಲ್ಲಿ ಸೀಮೆಎಣ್ಣೆ ಒದಗಿಸಬೇಕು; ಪಡಿತರ ಚೀಟಿದಾರರಿಗೆ 6 ಲೀಟರ್ ಕೊಡಬೇಕು.

6) ದಲಿತರಿಗಾಗಿ ಇರುವ ವಿವಿಧ ಯೋಜನೆಗಳು ಭ್ರಷ್ಟಾಚಾರದಿಂದ ದಲಿತರಿಗೆ ತಲಪುವುದಿಲ್ಲ. ಈ ಕುರಿತು ಬೆಳ್ತಂಗಡಿಯಲ್ಲಿ ನಡೆದ ಹಕ್ಕೊತ್ತಾಯ ಸಮಾವೇಶದಲ್ಲಿ ಮಂಡಿಸಿದ ಪ್ರಬಂಧ ಪರಿಗಣಿಸಬೇಕು. (ಜತೆಗಿದೆ) ದಲಿತರಿಗೆ ಖಾಸಗಿ ರಂಗದಲ್ಲಿಯೂ ನೌಕರಿ ಮೀಸಲಾತಿಗೆ ಕ್ರಮಕೈಗೊಳ್ಳಬೇಕು.

7) ರಾಜ್ಯೀಯ ಉದ್ಯೋಗ ದೃಢೀಕರಣ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಬೇಕು. ಮತ್ತು ಇದರನ್ವಯ ದಿನಗೂಲಿ ರೂ.135 - ಕ್ಕೆ ನಿಗದಿಗೊಳಿಸಬೇಕು.

8) ವಿಧಾನಸಭೆ, ವಿಧಾನ ಪರಿಷತ್, ಪಾರ್ಲಿಮೆಂಟ್‌ನಲ್ಲಿ ಮಹಿಳೆಯರಿಗೆ ಕನಿಷ್ಠ 33 % ಮೀಸಲಾತಿ ದೊರೆಯಬೇಕು ಮತ್ತು ಮಂತ್ರಿ ಮಂಡಲದಲ್ಲಿಯೂ ಕನಿಷ್ಠ 1/3 ಸ್ಥಾನ ದೊರೆಯಬೇಕು. ರಾಜಕೀಯ ಪಕ್ಷಗಳ ಪದಾಧಿಕಾರಿಗಳಲ್ಲಿಯೂ ಮಹಿಳೆಯರಿಗೆ ಹೆಚ್ಚಿನ ಸ್ಥಾನ ಕೊಡಬೇಕು.

9) ಕೌಟುಂಬಿಕ ದೌರ್ಜನ್ಯ ತಡೆ ಕಾನೂನು ಜಾರಿ ಸಹಿತ ಮಹಿಳೆಯರ ಸಶಕ್ತತೆಗೆ, ಅಭಿವೃದ್ಧಿಗೆ ಇರುವ ಯೋಜನೆಗಳು ಸರಿಯಾಗಿ ಜಾರಿಯಾಗಬೇಕು. ನ್ಯಾಯಾಧೀಶರು ಸಹಿತ ಉನ್ನತ ಅಧಿಕಾರಿಗಳಿಗೆ ಜೆಂಡರ್ ತಿಳುವಳಿಕೆ ಕಾರ್ಯಾಗಾರ ಮಾಡಬೇಕು. (ಬೆಳ್ತಂಗಡಿಯಲ್ಲಿ ಹಕ್ಕೊತ್ತಾಯ ಸಮಾವೇಶದಲ್ಲಿ ಮಂಡಿಸಿದ ಪ್ರಬಂಧ ಜತೆಗಿದೆ)

10) ವಿದೇಶೀ ಆಳ ಸಮುದ್ರ ಮೀನುಗಾರಿಕೆ ತಡೆಯಬೇಕು. ವಿಶ್ವವ್ಯಾಪಾರ ಒಪ್ಪಂದದಿಂದ ಮೀನುಗಾರಿಕೆ ಹೊರತು ಪಡಿಸಬೇಕು., CRZ ಹೆಸರಿನಲ್ಲಿ ಮೀನುಗಾರರಿಗೆ ಮನೆಕಟ್ಟುಲು ಆಗುತ್ತಿರುವ ಕಿರುಕುಳ ತಡೆಯಬೇಕು, ಕರಾವಳಿಯಲ್ಲಿ ಕಡಲ್ಕೊರೆತ ತಡೆಗೆ ಶಾಶ್ವತ ಯೋಜನೆ ಕೈಗೊಳ್ಳಬೇಕು.

11) ರಕ್ಷಿತಾರಣ್ಯವೆಂದು ಹೇಳಲ್ಪಡುವ ಕಂದಾಯ ಭೂಮಿಯನ್ನು ಅತಿಕ್ರಮಣ ಮಾಡಿ ಕೃಷಿ ಮಾಡಿರುವ ಸಣ್ಣ ರೈತರ ಭೂಮಿ 5 ಎಕ್ರೆ ಮಿತಿಯೊಳಗೆ, ಕಂದಾಯ ಭೂಮಿ ಸಕ್ರಮದ ನಿಯಮಾನುಸಾರ, ಸಕ್ರಮಗೊಳಿಸಲು ಕ್ರಮಕೈಗೊಳ್ಳಬೇಕು.

12) ಕುದುರೆಮುಖ ರಾಷ್ಟ್ರೀಯ ಉದ್ಯಾನವಾಸಿಗಳ ಅಭಿವೃದ್ಧಿ ಯೋಜನೆಗಳು ಅವರಿಗೆ ತಲಪುತ್ತಿಲ್ಲ. ಆದಿವಾಸಿಗಳನ್ನು ಎತ್ತಂಗಡಿ ಮಾಡದ ಭೂಮಿ ಮತ್ತು ಇತರ ಹಕ್ಕುಗಳನ್ನು ನೀಡಬೇಕು. ಆದಿವಾಸಿಗಳು ವಾಸಿಸುವ ಸ್ಥಳಗಳನ್ನು ಅನುಸೂಚಿತ ಪ್ರದೇಶಗಳೆಂದು ಘೋಷಣೆ ಮಾಡಬೇಕು ಮತ್ತು ಅವರು ವಾಸಿಸುವ ಪ್ರದೇಶದಲ್ಲೇ ಅಭಿವೃದ್ಧಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.

13) ರಾಜ್ಯದ್ಯಂತ ವಿಶೇಷವಾಗಿ ಕರಾವಳಿ ಜಿಲ್ಲೆಗಳಲ್ಲಿ ಕೋಮುಸಾಮರಸ್ಯ ಕಾಪಾಡಲು ವಿಶೇಷ ಕ್ರಮಕೈಗೊಳ್ಳಬೇಕು.

ಪ್ರಜಾಧಿಕಾರ ವೇದಿಕೆ - ಕರ್ನಾಟಕದ ಗುರಿ, ಉದ್ದೇಶಗಳು

1. **ಜನರ ಸಹಭಾಗಿತ್ವದ ಪ್ರಜಾಪ್ರಭುತ್ವದ ನಿರ್ಮಾಣ**
2. ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸುವ ಮೂಲಕ ವಿಕೇಂದ್ರಿತ ವ್ಯವಸ್ಥೆಯನ್ನು ಜಾರಿಯಲ್ಲಿ ತರುವುದು.
3. ಕೇಂದ್ರ ಮತ್ತು ರಾಜ್ಯ ಸರಕಾರ, ಎಲ್ಲ ಜನಪ್ರತಿನಿಧಿಗಳು ಮತ್ತು ರಾಜಕೀಯ ಪಕ್ಷಗಳನ್ನು ಪ್ರಜೆಗಳಿಗೆ ಉತ್ತರಬಾಧ್ಯರನ್ನಾಗಿಸುವುದು.
4. ಕೃಷಿ ಕ್ಷೇತ್ರ, ಸಣ್ಣ ರೈತರು, ಕೃಷಿ ಕಾರ್ಮಿಕರು, ನೇಕಾರರು ಮತ್ತು ಬೀಡಿ ಕಾರ್ಮಿಕರಂಥ ಅಸಂಘಟಿತ ಶ್ರಮಿಕರು, ದಲಿತರು, ಮಹಿಳೆಯರು,ಮೀನುಗಾರರು-ಒಟ್ಟಾರೆ ಅಂಚಿಗೆ ತಳ್ಳಲ್ಪಟ್ಟ ಬಡ ಜನತೆಯನ್ನು ಬಾಧಿಸುವ ನೀತಿ, ಧೋರಣೆಗಳ ವಿರುದ್ಧದ ಧ್ವನಿ ಸರಕಾರ ಕೇಳಿಸಿಕೊಳ್ಳುವಂತೆ ಆಹಿಂಸಾತ್ಮಕ ಆಂದೋಲನ ರೂಪಿಸುವುದು.
5. ಆಹಾರದ ಹಕ್ಕು, ಉದ್ಯೋಗದ ಹಕ್ಕು, ಶಿಕ್ಷಣ ಮತ್ತು ಆರೋಗ್ಯದ ಹಕ್ಕು, ಈ ತರ ಬದುಕಿನ ಹತ್ತು ಹಲವು ಆಯಾಮಗಳನ್ನು ಪುರಸ್ಕರಿಸುವುದು.
6. ನೆಲ- ಜಲ-ಅರಣ್ಯಾದಿ ಪ್ರಾಕೃತಿಕ ಸಂಪನ್ಮೂಲಗಳ ಮೇಲಿನ ಹಕ್ಕು ಇವನ್ನು ಅವಲಂಬಿಸಿರುವ ಸಮುದಾಯಕ್ಕೇ ಇರುವಂತೆ ಮಾಡುವುದು.
7. ಈ ಮೇಲಿನ ಗುರಿ, ಉದ್ದೇಶಗಳನ್ನು ಈಡೇರಿಸಲು ಪಕ್ಷರಹಿತ ರಾಜಕೀಯ ಕಾರ್ಯಾಚರಣೆಯಲ್ಲಿ ನಂಬಿಕೆ ಇರುವ ಹಾಗೂ ಸಮಾಜದ ಎಲ್ಲಾ ಬಡಜನರ ಬದುಕಿನ ಹಕ್ಕುಗಳಿಗಾಗಿ ಹೋರಾಟದ ದಾರಿ ಅನುಸರಿಸುತ್ತಿರುವ ಜನರು, ಜನ ಸಂಘಟನೆಗಳು, ಸ್ವಯಂ ಸೇವಾ ಸಂಸ್ಥೆಗಳನ್ನು ಒಗ್ಗೂಡಿಸಿ ಈ ಜನಾಂದೋಲನವನ್ನು ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಮಾಡುವುದು.

ಒನ್ನೆಲೆ

ದಕ್ಷಿಣ ಕನ್ನಡ ಜಿಲ್ಲೆಯ ಗುರುವಾಯನಕೆರೆಯ ನಾಗರಿಕ ಸೇವಾ ಟ್ರಸ್ಟ್‌ನ [illegible] ಶ್ರಿದಶಮಾನೋತ್ಸವ ಮತ್ತು ಟ್ರಸ್ಟ್ ಪ್ರವರ್ತಿತ ಜನಸಂಘಟನೆಗಳ ದಶಮಾನೋತ್ಸವದ ಅಂಗವಾಗಿ ತಾ.25-2-2007ರಂದು ಬೆಳ್ತಂಗಡಿಯಲ್ಲಿ ಪ್ರಜಾಧಿಕಾರ ಪ್ರತಿಪಾದನಾ ಮಹಾಧಿವೇಶನವನ್ನು ಆಯೋಜಿಸಲಾಗಿತ್ತು. ಜನಸಂಘಟನೆಗಳ 30 ಸಾವಿರ ಸದಸ್ಯರು ಭಾಗವಹಿಸಿದ್ದ ಈ ಬೃಹತ್ ಸಮಾವೇಶದಲ್ಲಿ, ರಾಜ್ಯದ 46 ಸಂಘಟನೆಗಳು ತಜ್ಞರು ಸಿದ್ಧಪಡಿಸಿದ, 1. **ಕೃಷಿ ಮತ್ತು ಸಣ್ಣ ರೈತರು, ಕೃಷಿ ಕೂಲಿಕಾರರು; 2. ದಲಿತರು 3. ಮಹಿಳೆಯರು - ಈ ಮೂರು ಸಮಾಜದ ಶೋಷಿತ** ಘಟಕಗಳ ಬಗೆಗಿನ ಪ್ರತಿಪಾದನಾ ಪ್ರಬಂಧಗಳನ್ನು ಮತ್ತು ಹಕ್ಕೊತ್ತಾಯಗಳನ್ನು ಮಂಡಿಸಲಾಗಿತ್ತು. ಸಮಯದ ಮಿತಿಯಿಂದಾಗಿ ಆದಿವಾಸಿಗಳ ಮತ್ತು ಅಸಂಘಟಿತ ಕಾರ್ಮಿಕರ ಅಂಚಿಗೆ ತಳ್ಳಲ್ಪಟ್ಟವರನ್ನು ಬಾಧಿಸುವ ಇತರ ವಿಚಾರಗಳ ಕುರಿತ ಪ್ರಬಂಧ ಮಂಡಿಸಲಾಗಿರಲಿಲ್ಲ. ಆದರೆ ಇವುಗಳೆಲ್ಲವನ್ನೂ ಹಕ್ಕೊತ್ತಾಯಗಳಲ್ಲಿ ಒಳಪಡಿಸಲಾಗಿತ್ತು. ರಾಜ್ಯದ ಮಂತ್ರಿಗಳು, ಎಲ್ಲಾ ರಾಜಕೀಯ ಪಕ್ಷಗಳ ರಾಜ್ಯ ಮುಖಂಡರು ಈ ಹಕ್ಕೊತ್ತಾಯಗಳಿಗೆ ಸ್ಪಂದಿಸಿ ತಮ್ಮ ನಿಲುವುಗಳನ್ನು ಪ್ರಸ್ತುತಪಡಿಸಬೇಕೆಂಬ ಉದ್ದೇಶವಿತ್ತು. ಆದರೆ ರಾಷ್ಟ್ರಾಧ್ಯಕ್ಷರ ಕರ್ನಾಟಕ ಭೇಟಿ ಕಾರ್ಯಕ್ರಮದಿಂದಾಗಿ ಒಪ್ಪಿಕೊಂಡ ಪ್ರಕಾರ ಹೆಚ್ಚಿನವರಿಗೆ ಅಂದು ಬರಲಾಗಲಿಲ್ಲ. ಬಿಜೆಪಿ, ಕಾಂಗ್ರೆಸ್, ಜನತಾ ದಳದ ಜಿಲ್ಲಾ ಮುಖ್ಯಸ್ಥರು, ಶಾಸಕರು, ಮಾಜಿ ಮಂತ್ರಿಗಳು, ಮಹಿಳಾ ಆಯೋಗದ ಅಧ್ಯಕ್ಷರು ಭಾಗವಹಿಸಿದ್ದರು. ಆಶ್ವಾಸನೆ ಪ್ರಕಾರ ಏಪ್ರಿಲ್ 18ರಂದು ಕೇಂದ್ರ ಸಚಿವ ಶ್ರೀ ಆಸ್ಕರ್ ಫೆರ್ನಾಂಡಿಸ್ ಟ್ರಸ್ಟ್‌ಗೆ ಭೇಟಿ ನೀಡಿ ಸಮಾವೇಶದ ಹಕ್ಕೊತ್ತಾಯಗಳಿಗೆ ಸ್ಪಂದಿಸಿದ್ದಾರೆ. ದ.ಕ. ಜಿಲ್ಲಾಮಟ್ಟದಲ್ಲಿ ಜೂನ್ 10ರಂದು ಮಂಗಳೂರಿನಲ್ಲಿ ಹಕ್ಕೊತ್ತಾಯಕ್ಕೆ ಸ್ಪಂದನೆ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಬಿ.ನಾಗರಾಜ ಶೆಟ್ಟಿ ಮತ್ತು ರಾಜಕೀಯ ಪಕ್ಷಗಳ ಜಿಲ್ಲಾಧ್ಯಕ್ಷರಿಂದ ನಡೆದಿದೆ.

ತಾ. 26-2-2007ರಂದು ಎನ್‌ಎಸ್‌ಟಿ ಆಶ್ರಯದಲ್ಲಿ ಗುರುವಾಯನಕೆರೆಯಲ್ಲಿ ನಡೆದ ರಾಷ್ಟ್ರದ ಸಮಾನ ಮನಸ್ಕ 43 ಸ್ವಯಂಸೇವಾ ಸಂಸ್ಥೆ/ಸಂಘಟನೆಗಳ ಸಮಾಲೋಚನಾ ಸಭೆಯಲ್ಲಿ ಸೇರಿದ 70ಕ್ಕೂ ಹೆಚ್ಚು ಪ್ರತಿನಿಧಿಗಳು **ಈ ತರದ ಜನಪರ ರಾಜಕೀಯ ಪ್ರಕ್ರಿಯೆ ವ್ಯಾಪಕವಾಗಿ** ಮುಂದುವರಿಯುವ ಅಗತ್ಯವನ್ನು ಮನಗಂಡು ಇದಕ್ಕಾಗಿ ಒಂದು ಕನಿಷ್ಠ ಸಾಮಾನ್ಯ ಕಾರ್ಯಕ್ರಮ ರೂಪಿಸುವ ನಿರ್ಧಾರ ಕೈಗೊಂಡರು. **ಈ ಸಭೆಯಲ್ಲಿ ಕೇರಳ, ತಮಿಳ್ನಾಡಿನ ಸಂಘಟನೆಗಳ** ಪ್ರತಿನಿಧಿಗಳೂ, ದೆಹಲಿಯ ಫೋರಂ ಫಾರ್ ಫುಡ್ ಸೆಕ್ಯುರಿಟಿ ಎಂಡ್ ಬಯೋಟೆಕ್ನಾಲಜಿಯ ಡಾ| ದೇವಿಂದರ್ ಶರ್ಮಾರೂ ಭಾಗವಹಿಸಿದ್ದರು. ಇದರ ಅನುಸರಣಾತ್ಮಕ ಸಭೆ **ತಾ. 12.4.2007**ರಂದು ಗುರುವಾಯನಕೆರೆಯಲ್ಲಿ ನಡೆಯಿತು. ಸುದೀರ್ಘ ಚರ್ಚೆಯ ಬಳಿಕ ಈ ಪೇದಿಕೆಗೆ **ಪ್ರಜಾಧಿಕಾರ ವೇದಿಕೆ- ಕರ್ನಾಟಕ** ಎಂದು ನಾಮಕರಣ ಮಾಡಲಾಯ್ತು.

ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಒತ್ತಡದಲ್ಲಿ ನಮ್ಮ ಸರಕಾರಗಳು ನಮ್ಮ ದೇಶದ ಕೃಷಿ ಕ್ಷೇತ್ರದ ಸಣ್ಣ ಕೃಷಿಕರು, ಕೃಷಿ ಕೂಲಿಕಾರರ, ಕಾರ್ಮಿಕ ಹಿತಗಳ ವಿರುದ್ಧ ನೀತಿಯನ್ನು ಅವಲಂಬಿಸುತ್ತಿದೆ. ಇದರಿಂದ ಈ ವರ್ಗಗಳ, ದಲಿತರ, ಮಹಿಳೆಯರ, ಆದಿವಾಸಿಗಳ, ಮೀನುಗಾರರ, ಅಸಂಘಟಿತ ಕಾರ್ಮಿಕರ ಬದುಕು ಅತಂತ್ರವಾಗುತ್ತಾ ಇದೆ. ವಿರೋಧಿ ರಾಜಕೀಯ

ಪಕ್ಷಗಳೂ ಜನಪರ ದನಿ ಎತ್ತುವುದು ಕ್ಷೀಣವಾಗಿದೆ. ಪ್ರಜೆಗಳೇ ಎಚ್ಚೆತ್ತು ಸಂಘಟಿತರಾಗಿ ಈ ಸವಾಲನ್ನು ಕೂಡಲೇ ಎದುರಿಸಲೇಬೇಕಾಗಿದೆ. ಎಲ್ಲಾ ರಾಜಕೀಯ ಪಕ್ಷಗಳು, ಜನಪ್ರತಿನಿಧಿಗಳು ಜನರ ಸಮಸ್ಯೆಗಳಿಗೆ, ಪ್ರಶ್ನೆಗಳಿಗೆ ಉತ್ತರಿಸುವಂತೆ ಮಾಡುವ ಪ್ರಕ್ರಿಯೆ ತೀವ್ರಗೊಳಿಸಬೇಕಾಗಿದೆ. ಈ ದಿಕ್ಕಿನಲ್ಲಿ ನಾಗರಿಕ ಸೇವಾ ಟ್ರಸ್ಟ್ ಮತ್ತು ಟ್ರಸ್ಟ್ ಪ್ರವರ್ತಿತ ಕೃಷಿಕ, ಮಹಿಳಾ, ದಲಿತ ಜನಸಂಘಟನೆಗಳು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ 3 ಚುನಾವಣಾ ಸಂದರ್ಭಗಳಲ್ಲಿ (ಪಾರ್ಲಿಮೆಂಟ್/ ಅಸೆಂಬ್ಲಿ,ಗ್ರಾಮ ಪಂಚಾಯತ್,ತಾಲೂಕು-ಜಿಲ್ಲಾ ಪಂಚಾಯತ್) ನಡೆಸಿದ ಮತದಾರರ ಜಾಗೃತಿ, ಜನರ ಪ್ರಣಾಳಿಕೆ ಮಂಡನೆ, ಅಭ್ಯರ್ಥಿಗಳೊಂದಿಗೆ ಮುಖಾ ಮುಖಿ ಮತ್ತು ಚುನಾವಣಾ ಬಳಿಕ ಹಕ್ಕೊತ್ತಾಯ ಆಗ್ರಹದ ಕಾರ್ಯಾಚರಣೆಗಳು ಸಾಕಷ್ಟು ಪರಿಣಾಮಕಾರಿಯಾಗಿದೆ. ಮತದಾರರಲ್ಲಿ ಪ್ರಶ್ನಿಸುವ ಮನೋಭಾವ ಹೆಚ್ಚಿಸಿದೆ. ಗ್ರಾಮ/ವಾರ್ಡ್ ಸಭೆಯಲ್ಲಿ ಭಾಗವಹಿಸುವಿಕೆ ಹೆಚ್ಚಿದೆ. ಆದ್ದರಿಂದ ಇದೇ ರೀತಿಯ ಪ್ರಕ್ರಿಯೆಯನ್ನು ರಾಜ್ಯವ್ಯಾಪಿ ಆಂದೋಲನವಾಗಿ ವಿಸ್ತರಿಸಲು ನಿರ್ಧರಿಸಲಾಯ್ತು.

ಪ್ರಜಾಧಿಕಾರ ವೇದಿಕೆಯ ರಾಜ್ಯ ಕಾರ್ಯಕಾರಿ ಸದಸ್ಯರು ಮತ್ತು ಜಿಲ್ಲಾ ಸಂಚಾಲಕರು :

ಹೆಸರು	ಸಂಸ್ಥೆ/ಸಂಘಟನೆ	ಜಿಲ್ಲೆ	ಜವಾಬ್ದಾರಿ
1. ಶ್ರೀ ದಿಲೀಪ್ ಐಮಲ್,	ಪರಿವರ್ತನ(mob:9448157588)	ಬೆಳಗಾವಿ	ರಾಜ್ಯ ಸಂಚಾಲಕ
2. ಶ್ರೀ ಬಿ. ಶಿವಣ್ಣ ಗೌಡ	ಸಪ್ತಗಿ(mob:9448733838)	ಬೆಂಗಳೂರು ಗ್ರಾ.	ರಾಜ್ಯ ಸಂಚಾಲಕ
3. ಶ್ರೀ ಕೆ. ಸೋಮಾಪುರಮಠ	ನಾಗರಿಕ ಸೇವಾ ಟ್ರಸ್ಟ್(mob:9448287050)	ದಕ್ಷಿಣ ಕನ್ನಡ	ರಾಜ್ಯ ಸಂಚಾಲಕ
4. ಡಾ. ಎಲ್.ಹೆ. ಬಿಳಿ	ಹೆಲಲಎಮಿಲ್ ಸೊಸೈಟಿ ಆಸ್ಪತ್ರೆ ಬೆಂಗಳೂರು	ಕರ್ನಾಟಕ ಸಮ್ಮ	
5. ಶ್ರೀ ವೈ.ಬಿ. ರಾಮಕೃಷ್ಣ	ಸಮಗ್ರ ವಿಕಾಸ(mob: 9448053914)	ಬೆಂಗಳೂರು	ಕರ್ನಾಟಕ ಸಮ್ಮ
6. ಶ್ರೀಮತಿ ವಿದ್ಯಾ ನಾಯಕ್	ಕರವಳ ಮಹಿಳಾ ಜಾಗೃತಿ ವೇದಿಕೆ	ದಕ್ಷಿಣ ಕನ್ನಡ	ಕರ್ನಾಟಕ ಸಮ್ಮ
7. ಶ್ರೀ ಕೆ.ಬಿ. ರುದ್ರಸ್ವಾಮಿ	ಸ್ಪೂರ್ತಿ	ದಾವಣಗೆರೆ	ಕರ್ನಾಟಕ ಸಮ್ಮ
8. ಶ್ರೀಮತಿ ಕೆ. ಸಾವಿತ್ರಿ	ಸಾಧನಾ	ಬೆಂಗಳೂರು ಗ್ರಾ.	ಕರ್ನಾಟಕ ಸಮ್ಮ
9. ಶ್ರೀ ಬಿ. ಎಂ. ಕುಮಾರಸ್ವಾಮಿ	ಸ್ಪಂದನ ಜಾಗೃತಿ ವೇದಿಕೆ	ಶಿವಮೊಗ್ಗ	ಕರ್ನಾಟಕ ಸಮ್ಮ
10. ಶ್ರೀಮತಿ ಪಿ. ನಿರ್ಮಲಾ	ಸ್ಪಂದನ	ಬೆಳಗಾವಿ	ಕರ್ನಾಟಕ ಸಮ್ಮ
11. ಶ್ರೀಮತಿ ಆಶಾ ಲಿಯೋ ಶೆಟ್ಟಿ	ಸಮಾಜ ಪರಿವರ್ತನ ಚಳವಳಿ	ದಕ್ಷಿಣ ಕನ್ನಡ	ಕರ್ನಾಟಕ ಸಮ್ಮ
12. ಶ್ರೀ ಜೆ.ಎಸ್. ಸಿಂಘ	ರೀಚ್	ದಾವಣಗೆರೆ	ಕರ್ನಾಟಕ ಸಮ್ಮ
13. ಶ್ರೀ ಪರಿಷಾ ಶರ್ಮ	ಹ್ಯೂಮನ್ ಅಂಡ್ ಇನ್ಸ್ಟ್ಯೂಷನ್ ಡೆವಲಪ್‌ಮೆಂಟ್ ಫೋರಂ	ಬೆಂಗಳೂರು	ಕರ್ನಾಟಕ ಸಮ್ಮ
14. ಶ್ರೀ ವಿಜಯಾಧಾಜಿ ಗೊಂಡಿಪಳಕ್ಕ	ಸ್ವದೇಶಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಸಂಸ್ಕೃತಿಕ ಸಂಸ್ಥೆ	ಕೊಪ್ಪಳ	ಕರ್ನಾಟಕ ಸಮ್ಮ ಜಿಲ್ಲಾ ಸಂಚಾಲಕ
15. ಶ್ರೀ ಆನಂದ ಹೆಗ್ಡೆ ಆಲಂಬ	ಪ್ಲೆಸ್ ಲಕ್ಷ್ಮಿ ಆಂದೋಲನ	ಉತ್ತರಕನ್ನಡ	ಜಿಲ್ಲಾ ಸಂಚಾಲಕ
16. ಶ್ರೀ ರಾಮಚಂದ್ರ	ಪ್ರೊಜ್ ಸೊರ್ಟ್	ಬೆಂಗಳೂರು ನಗರ	ಜಿಲ್ಲಾ ಸಂಚಾಲಕ
17. ಶ್ರೀ ಜೆ.ಡಿ. ರಮೇಶ್	ಶ್ರೀ ಕಾಡ ವಿದ್ಯಾ ಸಂಸ್ಥೆ	ಹಾಸನ	ಜಿಲ್ಲಾ ಸಂಚಾಲಕ
18. ಶ್ರೀ ಬಿ. ಹನುಮಂತಪ್ಪ	ಚಿತ್ರಪ್ರ	ಚಿತ್ರದುರ್ಗ	ಜಿಲ್ಲಾ ಸಂಚಾಲಕ
19. ಶ್ರೀ ರಾಯ್ ಡೇವಿಡ್	ಕರ್ಣ	ಕೊಡಗು	ಜಿಲ್ಲಾ ಸಂಚಾಲಕ
20. ಶ್ರೀ ಕೆ. ಶೇಖರ್	ಸಾಧನಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆ	ಶಿವಮೊಗ್ಗ	ಜಿಲ್ಲಾ ಸಂಚಾಲಕ

22. ಶ್ರೀ ನಂಜುಂಡಸ್ವಾಮಿ	ನಿರ್ಗ ಫೌಂಡೇಷನ್	ಮೈಸೂರು	ಜಿಲ್ಲಾ ಸಂಚಾಲಕ
23. ಶ್ರೀ ಸುರೇಶ್	ಸಾಧನಾ	ಚಾಮರಾಜನಗರ	ಜಿಲ್ಲಾ ಸಂಚಾಲಕ
24. ಶ್ರೀ ನಿ. ನರಸಿಂಹಮೂರ್ತಿ	ಅಭಿವೃದ್ಧಿ ಸಂಸ್ಥೆ	ತುಮಕೂರು	ಜಿಲ್ಲಾ ಸಂಚಾಲಕ
25. ಶ್ರೀ ಬಿ.ಡಿ. ಗೌಡ	ಸೆಟ್ಲರ್ ಫಾರ್ ರಿಯರ್ ಡೆವಲಪ್‌ಮೆಂಟ್	ಬಳ್ಳಾರಿ	ಜಿಲ್ಲಾ ಸಂಚಾಲಕ
26. ಶ್ರೀ ಮಾ.ನಾ ಬರಾದಾರ್	ಸಹಾರ ಸಂಸ್ಥೆ	ಗುಲ್ಬರ್ಗ	ಜಿಲ್ಲಾ ಸಂಚಾಲಕ
27. ಶ್ರೀ ಎಸ್. ಕುಮಾರ್	ಸ್ಪರ್ಧ(ಸರ್ವಾತೋಮುಖ) ಕೃಷಿ ಸಂಸ್ಥೆ	ಗದಗ	ಜಿಲ್ಲಾ ಸಂಚಾಲಕ
28. ಕು. ಪಿ. ಹೇಮಾವತಿ	ಕರವಳಿ ಮಹಿಳಾ ಜಾಗೃತಿ ವೇದಿಕೆ	ದಕ್ಷಿಣ ಕನ್ನಡ	ಜಿಲ್ಲಾ ಸಂಚಾಲಕ
29. ಶ್ರೀ ಲಕ್ಷ್ಮೀನಾರಾಯಣ ಕುಮಾರ್ ಶೆಟ್ಟಿ	ಕೃಷಿಕರ ವೇದಿಕೆ ಕರ್ನಾಟಕ	ಉಡುಪಿ	ಜಿಲ್ಲಾ ಸಂಚಾಲಕ
30. ಶ್ರೀ ಯಸ್.ಡಿ. ಬಳಿಗಾರ್	ನಿರ್ಧಾರ	ಹಾವೇರಿ	ಜಿಲ್ಲಾ ಸಂಚಾಲಕ
31. ಶ್ರೀ ಎಲ್.ಎಸ್. ಹಾಲಪ್ಪ	ಗುರು ಸಂಸ್ಥೆ	ದಾವಣಗೆರೆ	ಜಿಲ್ಲಾ ಸಂಚಾಲಕ
32. ಶ್ರೀಮತಿ ಲತಾ ಆನಂದ ಲೋಲೋ	ಗ್ರಾಮೀಣ ಅಭಿವೃದ್ಧಿ ಟ್ರಸ್ಟ್	ಬೆಳಗಾವಿ	ಜಿಲ್ಲಾ ಸಂಚಾಲಕ
33. ಶ್ರೀ ಎ. ಶಿವೋಮಣಿ	ಜಿಲ್ಲಾ ಲೇಬರ್ ಯೂನಿಯನ್	ಬೀದರ್	ಜಿಲ್ಲಾ ಸಂಚಾಲಕ
34. ಶ್ರೀ ಕೆ. ವೀರೇಶ್	ಸ್ಪರ್ಧ	ರಾಯಚೂರು	ಜಿಲ್ಲಾ ಸಂಚಾಲಕ
35. ಶ್ರೀ ಪ್ರಭು ಗೌಡ ಪಾಟೀಲ್	ಪಿಡಾ	ಬಿಜಾಪುರ	ಜಿಲ್ಲಾ ಸಂಚಾಲಕ
36. ಶ್ರೀ ಎಂ. ವೆಂಕಟೇಶ್	ಸರ್ಜ	ಬಾಗಲಕೋಟೆ	ಜಿಲ್ಲಾ ಸಂಚಾಲಕ
37. ಶ್ರೀ ಬಿ.ವೈ. ಪಾಟೀಲ್	ಕಲ್ಯಾಣ ಕರ್ನಾಟಕ ಸಂಸ್ಥೆ	ಧಾರವಾಡ	ಜಿಲ್ಲಾ ಸಂಚಾಲಕ
38. ಶ್ರೀ ರಾಮಕೃಷ್ಣ ಗೌಡ	ಪ್ರಯೋಗ್	ಕೋಲಾರ	ಜಿಲ್ಲಾ ಸಂಚಾಲಕ
39. ಶ್ರೀ ರಾಜೀವನ್ ಸಾಲಿಯಾನ್	ನಾಗರಿಕ ಸೇವಾ ಟ್ರಸ್ಟ್,(mob:9448287054) ದ.ಕ.		ಕಛೇರಿ ಸಮನ್ವಯಕ

ಬೆಂಗಳೂರು ಸಮಾವೇಶದ ನಂತರ . . .

ಆಗಸ್ಟ್ 6, 2007 ರ ಸಮಾವೇಶದ ಮರುದಿನ ಪ್ರಜಾಧಿಕಾರ ವೇದಿಕೆಯ ಕಾರ್ಯಕಾರಿ ಸದಸ್ಯರು, ಜಿಲ್ಲಾ ಸಂಚಾಲಕರು ಮತ್ತು ಆಯ್ದ ಪ್ರತಿನಿಧಿಗಳಿಗಾಗಿ ಒಂದು ದಿನದ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿದೆ.ಡಾ! ದೇವಿಂದರ್ ಶರ್ಮಾ ಮತ್ತು ಹಿರಿಯರ ಮಾರ್ಗದರ್ಶನದಲ್ಲಿ ಕೃಷಿಕ್ಷೇತ್ರದ, ಕೃಷಿಕರ ಸಮಸ್ಯೆಗಳಿಗೆ ಜನಾಂದೋಲನಗಳು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಕೈಗೊಳ್ಳಬೇಕಾದ ಕಾರ್ಯಾಚರಣೆಗಳ ಬಗ್ಗೆ ಹಾಗೂ ಪ್ರಜಾಧಿಕಾರ ವೇದಿಕೆಯ ಸಂಘಟನೆಯ ಸ್ವರೂಪ, ಭವಿಷ್ಯದ ಆಂದೋಲನದ ರೂಪರೇಷೆಗಳು, ಜಿಲ್ಲಾ ಮಟ್ಟದಲ್ಲಿ ಹಕ್ಕೊತ್ತಾಯ ಸಮಾವೇಶಗಳ ಕ್ರಿಯಾಯೋಜನೆ ಮುಂತಾದ ವಿಷಯಗಳನ್ನು ಚರ್ಚಿಸಿ ನಿರ್ಧರಿಸಲಾಗುವುದು.

ಭಾರತದ ಸಂವಿಧಾನ, ಪ್ರಜಾಪ್ರಭುತ್ವ, ಅಹಿಂಸೆ, ಜಾತ್ಯತೀತತೆ ಮತ್ತು ಪಾರದರ್ಶಕತೆಯಲ್ಲಿ ನಂಬಿಕೆ ಮತ್ತು ಬದ್ಧತೆ ಇರುವ ವ್ಯಕ್ತಿ ಮತ್ತು ಸಂಸ್ಥೆ, ಸಂಘಟನೆಗಳಿಗೆ ಪ್ರಜಾಧಿಕಾರ ವೇದಿಕೆ - ಕರ್ನಾಟಕವು ಬಡಜನರ ಬದುಕಿನ ಹಕ್ಕುಗಳಿಗಾಗಿ ಹಕ್ಕೊತ್ತಾಯದ ಈ ಆಂದೋಲನದಲ್ಲಿ ಕೈಜೋಡಿಸಬೇಕೆಂದು ಹೃತ್ಪೂರ್ವಕವಾಗಿ ಕರೆ ನೀಡುತ್ತದೆ.

ಪ್ರಜಾಧಿಕಾರ ವೇದಿಕೆಯ ವಿಳಾಸ :

ನಾಗರಿಕ ಸೇವಾ ಟ್ರಸ್ಟ್, ಕಛೇರಿ, ಅಂಚೆ: ಗುರುಪಾಯಸಕೆರೆ -574217(ದ.ಕ.ಜಿಲ್ಲೆ.) ಫೋನ್:08256-232019

ಬೆಂಗಳೂರು ಸಂಚಾರ್:ಶ್ರೀ ವೈ.ಬಿ.ರಾಮಕೃಷ್ಣ mob: 9448053914, ಶ್ರೀ ಶಿವರಾಜೇ ಗೌಡ mob: 9448733838

ಪ್ರಜಾಧಿಕಾರ ವೇದಿಕೆ - ಕರ್ನಾಟಕ

ರಾಜ್ಯ ಮಟ್ಟದ ಹಕ್ಕೊತ್ತಾಯ ಸಮಾವೇಶ:

ತಾ. 6 ಆಗಸ್ಟ್ 2007ರಂದು ಬೆಂಗಳೂರಿನಲ್ಲಿ ಕೃಷಿಕರ, ಕಾರ್ಮಿಕರ, ಬಡವರ, ದಲಿತರ, ಮಹಿಳೆಯರ, ಗಿರಿಜನರ ಒಟ್ಟಾರೆ ಶೋಷಿತರ ಬದುಕಿನ ಹಕ್ಕುಗಳಿಗಾಗಿ ರಾಜ್ಯ ಮಟ್ಟದ ಹಕ್ಕೊತ್ತಾಯ ಸಮಾವೇಶವನ್ನು ಆಯೋಜಿಸಲಾಗಿದೆ. ಕಳೆದ 3 ತಿಂಗಳುಗಳಿಂದ ರಾಜ್ಯಮಟ್ಟದ ಹಲವಾರು ಸಭೆಗಳು ಮತ್ತು ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಈ ಬಗೆಗಿನ ಜಾಗೃತಿ ಮತ್ತು ಸಂಘಟನಾ ಸಭೆಗಳನ್ನು ನಡೆಸಿ ಸರಕಾರ, ಮಂತ್ರಿಗಳು ಮತ್ತು ರಾಜಕೀಯ ಪಕ್ಷಗಳ ರಾಜ್ಯಾಧ್ಯಕ್ಷರುಗಳು ಇವರನ್ನೆಲ್ಲಾ ಸಂಪರ್ಕಿಸಿ ಸಮಾಲೋಚಿಸಿ ಈ ಅತ್ಯಂತ ಮಹತ್ವದ ಸಮಾವೇಶವನ್ನು ಸಂಘಟಿಸಲಾಗಿದೆ.

ಸಮಾವೇಶಕ್ಕೆ ಮುಖ್ಯ ಅತಿಥಿಗಳಾಗಿ ಉಪ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ, ಗೃಹ ಮಂತ್ರಿ ಶ್ರೀ ಎಂ.ಪಿ.ಪ್ರಕಾಶ್ ಮತ್ತು ವಿರೋಧ ಪಕ್ಷದ ನಾಯಕ ಶ್ರೀ ಧರಂ ಸಿಂಗ್ ಬರಲಿದ್ದಾರೆ. ನಮ್ಮ ಕೃಷಿ ಮತ್ತು ಕೃಷಿಕರ ಹಿತರಕ್ಷಣೆಗಾಗಿ ನಿರಂತರವಾಗಿ ದುಡಿಯುತ್ತಲಿರುವ ಡಾ! ದೇವಿಂದರ್ ಶರ್ಮಾ ಉದ್ಘಾಟನೆಯ ಭಾಷಣ ಮಾಡಲಿದ್ದಾರೆ.

ಪ್ರಜಾಧಿಕಾರ ವೇದಿಕೆಯು ರಾಜ್ಯ ಮತ್ತು ಜಿಲ್ಲಾಮಟ್ಟದ ಹಲವಾರು ಸಮಾಲೋಚನೆಗಳನ್ನು ನಡೆಸಿ ಅಂತಿಗೆ ತಳ್ಳಲಾದ, ಶೋಷಿತ ಬಡಜನರ ವಿವಿಧ ಸಮುದಾಯಗಳ ಪ್ರಮುಖ ಸಮಸ್ಯೆಗಳ ಪಟ್ಟಿಯನ್ನು ಸಿದ್ಧಗೊಳಿಸಿದೆ. ಜೀವನಾಧಾರದ ಈ ಮಹತ್ವದ ಪ್ರಶ್ನೆಗಳಿಗೆ ಸರಕಾರ, ಮಂತ್ರಿಗಳು, ಜನಪ್ರತಿನಿಧಿಗಳು ಮತ್ತು ಎಲ್ಲಾ ರಾಜಕೀಯ ಪಕ್ಷಗಳು ಸೂಕ್ತ ಗಮನ ಹರಿಸುವಂತಾಗಬೇಕು; ನೀತಿ, ಧೋರಣೆ, ಕಾನೂನುಗಳು ಜನಪರವಾಗುವಂತೆ ಪ್ರಯತ್ನಿಸುವಂತಾಗಬೇಕೆಂಬ ಉದ್ದೇಶದಿಂದ ಎಲ್ಲ ರಾಜಕೀಯ ಪಕ್ಷಗಳ ರಾಜ್ಯಾಧ್ಯಕ್ಷರನ್ನು ಸಮಾವೇಶಕ್ಕೆ ಆಹ್ವಾನಿಸಲಾಗಿದೆ. ಸಮಾವೇಶದ ಉದ್ಘಾಟನಾ ಕಾರ್ಯಕ್ರಮದ ನಂತರ ಜನರ ಹಕ್ಕೊತ್ತಾಯಗಳಿಗೆ ರಾಜಕೀಯ ಪಕ್ಷಗಳು ತಮ್ಮ ನಿಲುವನ್ನು ಪ್ರಕಟಿಸುವ ಕಾರ್ಯಕ್ರಮವನ್ನು ರೂಪಿಸಲಾಗಿದೆ. ರಾಜ್ಯದ ಪ್ರಮುಖ ರೈತ ಸಂಘಟನೆಗಳೂ ರೈತಪರ ನೀತಿ - ಯೋಜನೆಗಳ ಕುರಿತು ಅಭಿಪ್ರಾಯ - ಬೇಂಬಲ ವ್ಯಕ್ತಪಡಿಸಲಿದ್ದಾರೆ.

ಸರಕಾರ ಮತ್ತು ರಾಜಕೀಯ ಪಕ್ಷಗಳ ನೀತಿ, ಧೋರಣೆ ಮತ್ತು ಕಾನೂನುಗಳು, ಯೋಜನೆಗಳು, ಸಣ್ಣ ರೈತರು, ಕೃಷಿಕಾರ್ಮಿಕರು, ದಲಿತರು, ಆದಿವಾಸಿಗಳು, ಮಹಿಳೆಯರು, ಮೀನುಗಾರರು, ನೇಕಾರರು, ಕೊಳಚೆ ನಿವಾಸಿಗಳು, ಬೀದಿ ಕಾರ್ಮಿಕರು, ಒಟ್ಟಾರೆ ಬಡಜನರ ಪರವಾಗಿರಲು ಆಗ್ರಹಿಸುವುದೇ ಈ ಸಮಾವೇಶದ ಮುಖ್ಯ ಉದ್ದೇಶ.

ಕರ್ನಾಟಕ ರಾಜ್ಯದ ಎಲ್ಲಾ 27 ಜಿಲ್ಲೆಗಳಿಂದ 250ಕ್ಕೂ ಹೆಚ್ಚು ಸ್ವಯಂಸೇವಾ ಸಂಸ್ಥೆಗಳು, ಜನ ಸಂಘಟನೆಗಳು ಮತ್ತು ಚಳುವಳಿಗಳ ಲಕ್ಷಾಂತರ ಸದಸ್ಯರ ಪರವಾಗಿ 1200 ಅಧಿಕೃತ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ಕರಪತ್ರ

ಶ್ರಾವ್ಯ - ದೃಶ್ಯ

ಕೌಟುಂಬಿಕ ದೌರ್ಜನ್ಯವನ್ನು ತಡೆಯುವ ಉದ್ದೇಶದ ಶಿಕ್ಷಕರ ಮಾರ್ಗದರ್ಶಿಗೆ ಪೂರಕವಾಗಿ ಜನಪ್ರಿಯ ಚಿತ್ರಗಳು ಮತ್ತು ಸಾಕ್ಷ್ಯಚಿತ್ರಗಳ ಕ್ಲಿಪ್‌ಗಳು, ಇತರ ಬಳಗಗಳು/ಸಂಘಟನೆಗಳು ನಿರ್ಮಿಸಿರುವ ಸ್ಪಾಟ್‌ಗಳು ಹಾಗೂ ಬ್ರೇಕ್‌ತ್ರೂ ನಿರ್ಮಿಸಿದ ಮನ್ ಕೇ ಮನ್‌ಜೀರೇ ಮತ್ತು ಬಾಬುಲ್ ಎಂಬ ಎರಡು ಸಂಗೀತ ವಿಡಿಯೋಗಳನ್ನೊಳಗೊಂಡ ಶ್ರಾವ್ಯ - ದೃಶ್ಯ ಭಾಗವನ್ನು ನಿರ್ಮಿಸಲಾಗಿದೆ. ಈ ಎವಿ ಸಾಧನವು ಮಾರ್ಗದರ್ಶಿಯೊಂದಿಗೆ ವಿಸಿಡಿ ಅಥವಾ ವಿಎಚ್‌ಎಸ್‌ನ ರೂಪದಲ್ಲಿ ವಾಣಿಜ್ಯೇತರ ಪ್ರಸಾರಕ್ಕಾಗಿ ಮಾತ್ರ ಬರುತ್ತದೆ.

ಬ್ರೇಕ್‌ತ್ರೂ ಜನಸಂಸ್ಕೃತಿಯನ್ನು ಪರಿವರ್ತನಾ ಸಾಧನವಾಗಿ ಬಳಸುತ್ತದೆ. ಬ್ರೇಕ್‌ತ್ರೂ ಜನಪ್ರಿಯ ಮಾಧ್ಯಮಗಳನ್ನು ಪ್ರೋತ್ಸಾಹಿಸುವ ಮೂಲಕ ಒಂದು ಸಂಘಟನೆಯ ಕಾರ್ಯವನ್ನು ಅಥವಾ ಸಂದೇಶವನ್ನು ಹೆಚ್ಚು ವಿಶಾಲ ಜನಸ್ತೋಮಕ್ಕೆ ವಿಸ್ತರಿಸುವುದರಲ್ಲಿ ಅಂತಹ ಸಂಘಟನೆಗಳ ಮಹತ್ವ ಮತ್ತು ಪ್ರಭಾವವನ್ನು ಗುರುತಿಸುತ್ತದೆ. ಜನಮಾಧ್ಯಮಗಳಿಂದ ಬಂದ ಚಿತ್ರಗಳು ಭಾಗವಹಿಸುವವರ ಆಸಕ್ತಿಯನ್ನು ಹಿಡಿದಿಡುವ ಹಾಗೂ ಅನೇಕ ನಿರ್ಲಕ್ಷಿತ ಪ್ರಶ್ನೆಗಳ ಪರಿಶೀಲನೆಗೆ ಪ್ರೋತ್ಸಾಹ ನೀಡುವಿ ಕುತೂಹಲಕರ ಮತ್ತು ಪ್ರಚೋದಕ ಮಾರ್ಗವಾಗಿದೆ. ತರುಣಜನರು ಜನಪ್ರಿಯ ಚಿತ್ರಗಳಲ್ಲಿ ತೋರಿಸಲಾಗುವ ಕಥೆಗಳಿಗೆ ಪ್ರತಿಕ್ರಿಯೆ ತೋರುತ್ತಾರೆ ಹಾಗೂ ಚರ್ಚೆಗಳಲ್ಲಿ ಅಪಾರ ಉತ್ಸಾಹ ಮತ್ತು ಆಸಕ್ತಿಯಿಂದ ಭಾಗವಹಿಸುತ್ತಾರೆ ಎಂದು ನಮ್ಮ ಅನುಭವದಿಂದ ಕಂಡುಬಂದಿದೆ. ಫಿಲ್ಮ್ ಕ್ಲಿಪ್‌ಗಳು ಶಿಕ್ಷಕರ ಮಾರ್ಗದರ್ಶಿಯಲ್ಲಿರುವ ಅಭ್ಯಾಸಗಳು ಮತ್ತು ಮಾಹಿತಿಯನ್ನು ಹೆಚ್ಚು ಆಕರ್ಷಕವಾಗಿ ಹಾಗೂ ಯುವಕರಿಗೆ ಸುಲಭಗ್ರಾಹ್ಯವಾಗಿ ಮಾಡುತ್ತವೆ.

ಈ ಎವಿಯಲ್ಲಿರುವ ವಸ್ತುಗಳು ಜನಪ್ರಿಯ ಚಿತ್ರಗಳಲ್ಲಿ ಪುಷ್ಟೀಕರಿಸಿರುವ ಇತ್ಯಾತ್ಮಕ ಹಾಗೂ ನೇತ್ಯಾತ್ಮಕ ಸಂದೇಶಗಳೆರಡನ್ನೂ ಪ್ರತಿಬಿಂಬಿಸುತ್ತವೆ. ಇವುಗಳನ್ನು ಚರ್ಚೆಗಳನ್ನು ಪ್ರೋತ್ಸಾಹಿಸಲು ಮತ್ತು ಭಾರತದಲ್ಲಿ ಲಿಂಗಾಧಾರಿತ ಹಿಂಸೆ ಹಾಗೂ ಮಾನವ ಹಕ್ಕುಗಳಿಗೆ ಸಂಬಂಧಪಟ್ಟ ತಿಳುವಳಿಕೆಯನ್ನು ಗಾಢಗೊಳಿಸಲು ಮತ್ತು ಆ ಮೂಲಕ ವ್ಯಕ್ತಿಯನ್ನು ಹಾಗೂ ಸಮಾಜದ ಮನೋವೃತ್ತಿಗಳನ್ನು ಪರಿವರ್ತಿಸಲು ಉಪಯೋಗಿಸಲಾಗುವುದು.

ಎವಿ ಮುಖ್ಯಾಂಶಗಳು

ಕೌಟುಂಬಿಕ ದೌರ್ಜನ್ಯಗಳ ಕುರಿತು ಪ್ರಾರಂಭಿಕ ಪರಿಚಯ
(ಕರ್ಟನ್ ರೈಸರ್ - ಸ್ಥಿರ ಚಿತ್ರಗಳು)

ವಿಭಾಗ 1 : ಒಂದು ಸಂದರ್ಭವನ್ನು ವಿಧಿಸುವುದು.

ಚಟುವಟಿಕೆ 2 : ಹಿಂಸೆಯನ್ನು ಗುರುತಿಸುವುದು (ಮಾಂಟೇಜ್)

ಚಟುವಟಿಕೆ 3 : ಬಾಬುಲ್

ವಿಭಾಗ 2 : ಪೂರಕ ಅಂಶಗಳು

ಚಟುವಟಿಕೆ 1: ವೃತ್ತಿಪರರು - ಪುರುಷರು ಮತ್ತು ಸ್ತ್ರೀಯರು (ಅದನ್ನು ಬೇಕಾಮ್, ಕಹೋ ನ ಕಹೋ, ಸಮಯ್ ಮೊದಲಾದ ರೂಪಗಳಿಗೆ ಪರಿವರ್ತಿಸಿಕೊಳ್ಳಿರಿ)

ಚಟುವಟಿಕೆ 2 : ಲಿಂಗತ್ವಾಧಾರಿತ ನಿರೀಕ್ಷೆಗಳು (ಕಭೀ ಖುಶೀ ಕಭೀ ಗಮ್, ದಿಲ್‌ವಾಲೇ ದುಲ್ಹನಿಯಾ ಲೇ ಜಾಯೇಂಗೇ, ಮೃತ್ಯುದಂಡ್

ಚಟುವಟಿಕೆ 3 : ಓರ್ವ ಮಗನ ಮತ್ತು ಓರ್ವ ಮಗಳ ಮೌಲ್ಯ (ಹಮ್ ಸಾಥ್ ಸಾಥ್ ಹೈಂ, ಕೆ 3 ಜಿ, ಇಷ್ಕ್ ಹೈ ತುಮ್‌ಸೇ, ಮೃತ್ಯುದಂಡ್, ಸಮಯ್, ಬಾರ್ನ್ ಟು ಡೈ)

ಚಟುವಟಿಕೆ 4 : ಮನ್‌ಕೇ ಮನ್‌ಜೀರೇ

ಚಟುವಟಿಕೆ 5 : ಲಿಂಗತ್ವವನ್ನು (ಜೆಂಡರ್) ಅರ್ಥಮಾಡಿಕೊಳ್ಳುವುದು (ಕೆ 3 ಜಿ, ಹಮ್ ಸಾಥ್ ಸಾಥ್ ಹೈಂ, ಮೃತ್ಯುದಂಡ್ - ಬಾಘ್‌ಬಾನ್, ಕುಛ್ ನ ಕಹೋ)

ಚಟುವಟಿಕೆ 8: ಸಾಂಸ್ಕೃತಿಕ ಚಿಹ್ನೆಗಳು ; ಮಾಧ್ಯಮಗಳ ಕುರಿತು ಹೆಚ್ಚಿಗೆ (ಮೃತ್ಯುದಂಡ್, ಕೆ 3 ಜಿ)

ವಿಭಾಗ 3: ಪ್ರಭಾವ ಮತ್ತು ಪರಿಣಾಮಗಳು

ಚಟುವಟಿಕೆ 3 : ಬದುಕಿ ಉಳಿದವರು ಮಾತಾಡುತ್ತಾರೆ (ಸರ್ವೈವರ್ಸ್‌ಸ್ಪೀಕ್) (ಐಸಿಆರ್‌ಡಬ್ಲ್ಯು ಸ್ಪಾಟ್ಸ್, ಲಗೋರಿ ಸ್ಪಾಟ್ಸ್ (ಫೈನಲ್ ಕಂಟ್ರಿ)

ವಿಭಾಗ 4: ಹಿಂಸೆಯನ್ನು ಎದುರಿಸುವುದು (ಡೀಲಿಂಗ್ ವಿದ್ ವಯೊಲೆನ್ಸ್)

ಚಟುವಟಿಕೆ 2: ಜನಪ್ರಿಯ ಮಾಧ್ಯಮ ಮತ್ತು ಮಹಿಳೆಯರ ಆಯ್ಕೆ (ಐಸಿಆರ್‌ಡಬ್ಲ್ಯು ಸ್ಪಾಟ್ಸ್, ಬೆಂಡ್ ಇಟ್ ಲೈಕ್ ಬೆಕ್ಹಾಮ್, ಡಿಡಿಎಲ್‌ಜೆ, ಮೆಹೆಂದಿ)

ದೃಶ್ಯವಿವರ

ನೀವು ಹೊಡೆದಾಟದಲ್ಲಿದ್ದೀರಿ, ಅದನ್ನು ಆರಂಭಿಸಿದವರು ನೀವಲ್ಲ ಮತ್ತು ನಿಮ್ಮನ್ನು ನೆಲಕ್ಕೆ ತಳ್ಳಲಾಗಿದೆ. ಬಿದ್ದುದರ ಪರಿಣಾಮವಾಗಿ ನಿಮ್ಮ ಕೈ ಮುರಿಯತ್ತದೆ. ಅದಕ್ಕೆ 3 ವಾರಗಳ ತನಕ ಪಟ್ಟಿ ಹಾಕಲಾಗಿದೆ. ಆದರೆ ನೀವು ಸಾಧ್ಯವಾದಷ್ಟು ಸಹಜರೀತಿಯಲ್ಲಿ ಜೀವನ ಸಾಗಿಸಬೇಕಾಗಿದೆ. - ನಿಮಗೆ ಕೆಲಸ ಮಾಡುವುದನ್ನು /ಶಾಲೆಗೆ ಬರುವುದನ್ನು/ಮನೆ ಕೆಲಸ ಮಾಡುವುದನ್ನು ನಿಲ್ಲಿಸಲು ಅನುಮತಿಯಿಲ್ಲ. ನಿಮ್ಮನ್ನು ಕೆಳಗೆ ತಳ್ಳಿ ನಿಮ್ಮ ಕೈ ಮುರಿದ ವ್ಯಕ್ತಿಯನ್ನು ಯಾರೂ ಖಂಡಿಸಿಯೇ ಇಲ್ಲ ಮತ್ತು ಆತ ನಿಮ್ಮೊಂದಿಗೆ ಕೆಟ್ಟದಾಗಿ ವರ್ತಿಸುತ್ತಲೇ ಇದ್ದಾನೆ.

ಚರ್ಚೆಯ ಅಂಶಗಳು

- ನೀವು ಯಾವ ಬಂಧನಗಳಿಗೆ ಒಳಗಾಗುವಿರಿ? ಈ ಪರಿಸ್ಥಿತಿಯಲ್ಲಿ ನಿಮಗೆ ಹೇಗೆ ಅನಿಸುವುದು?
- ನಿಮ್ಮ ಸುತ್ತಲಿನ ಯಾರೂ ಸಹಾನುಭೂತಿ ತೋರದಿರುವುದರಿಂದ, ನಿಮ್ಮನ್ನು ಹಿಂಸಿಸಿದ ವ್ಯಕ್ತಿಯಿಂದ ಕೊಂಚವೂ ಸಹಾನುಭೂತಿ ಪ್ರಕಟವಾಗದಿರುವುದರಿಂದ ನಿಮಗೆ ಹೇಗೆ ಅನಿಸುವುದು?
- ತಪ್ಪು ಮಾಡಿದ್ದು ಯಾರು? ನೀವೇ ಇಲ್ಲ ನಿಮ್ಮ ಕೈ ಮುರಿದ ವ್ಯಕ್ತಿಯೇ ?
- ನಿಮ್ಮ ಕೆಲಸ ಅಥವಾ ಜೀವನದ ಗುಣಮಟ್ಟಕ್ಕೆ ಹಾನಿಯಾಗಿದೆಯೇ?
- ನೀವು ಹಿಂದಿನಂತೆಯೇ ಕೆಲಸ ಮಾಡಲು ಸಮರ್ಥರಾಗುವಿರಾ ಇಲ್ಲ ನಿಮ್ಮ ಕಾರ್ಯಕ್ಕೆ ಹಾನಿಯಾಗುವುದೇ?
- ನಿಮಗೆ ಹಾನಿ ಮಾಡಿದ ವ್ಯಕ್ತಿಯ ಕುರಿತು ಹೇಗೆ ಭಾವಿಸುವಿರಿ? ನೀವು ಈ ವ್ಯಕ್ತಿಗೆ ಹೆದರುವಿರಾ?

ಕೌಟುಂಬಿಕ ದೌರ್ಜನ್ಯದ ಸಂದರ್ಭದಲ್ಲಿ ಚರ್ಚೆ

ನಿಮ್ಮ ಕೈ ಮುರಿದ ವ್ಯಕ್ತಿ ನಿಮ್ಮ ಗಂಡನೆಂದೂ ನೀವು ಹೆಂಡತಿಯೆಂದೂ ಊಹಿಸಿರಿ. ತಪ್ಪು ಮಾಡಿದವರು ಯಾರು?
ತನ್ನನ್ನು ಶಾರೀರಿಕವಾಗಿ ಹಿಂಸಿಸಿದ ವ್ಯಕ್ತಿಯೊಂದಿಗೆ ಇಷ್ಟು ನಿಕಟ ಸಂಬಂಧ ಹೊಂದಿರುವ ಕುರಿತು ಪತ್ನಿಗೆ ಹೇಗೆ ಅನಿಸಬಹುದು?
ಈ ಹಿಂಸೆಯಿಂದಾಗಿ ಆಕೆಯ ಕೆಲಸದ ಮೇಲೆ (ಮನೆಕೆಲಸ ಮತ್ತು ಉದ್ಯೋಗ) ಯಾವ ರೀತಿಯ ಪರಿಣಾಮವಾಗಬಹುದು?
ಆಕೆ ಸಹಾಯ ಯಾಚಿಸುವಂತಹವರು ಯಾರಾದರೂ ಇದ್ದಾರೆಯೇ? ಆಕೆಗೆ ಸಹಾಯ ಕೋರುವ ಅಧಿಕಾರ ಇದೆಯೇ?
ಈ ರೀತಿಯ 'ಉಪಚಾರ'ದ ಬಳಿಕ ಆಕೆ ಗಂಡನನ್ನು ಬಿಡುವುದು ಸಮರ್ಥನೀಯವೇ? ಅಲ್ಲವಾದರೆ ಆಕೆಯನ್ನು ಯಾವಾಗ ಸಮರ್ಥಿಸಬಹುದು?

ದೃಶ್ಯವಿವರ

ನಿಮ್ಮ ಕೆಲಸವು ಬಹಳ ಚೆನ್ನಾಗಿದೆಯೆಂಬುದು ನಿಮಗೆ ಗೊತ್ತಿದ್ದರೂ ನಿಮ್ಮ ಶಿಕ್ಷಕ / ಅಧಿಕಾರಿ ಸತತವಾಗಿ ನಿಮ್ಮನ್ನು ಬಯ್ಯುತ್ತಾರೆ ಮತ್ತು ನಿಮ್ಮ ಕೆಲಸದ ಕುರಿತು ಅತೃಪ್ತಿಯನ್ನು ವ್ಯಕ್ತಪಡಿಸುತ್ತಾರೆ. ನೀವು ಆತನೊಂದಿಗೆ (ಅಥವಾ ಆಕೆಯೊಂದಿಗೆ) ಆ ಕುರಿತು ಮಾತಾಡಲು ಯತ್ನಿಸುವಾಗ ಅವರು ಟೀಕೆಯನ್ನು ಹೆಚ್ಚಿಸುತ್ತಾರೆ. ನೀವು ನಿಮ್ಮ ಕೆಲಸವನ್ನು (ಅಥವಾ ಶಾಲೆಯನ್ನು) ಬಿಡಲಾರಿರಿ ಮತ್ತು ನಿಮ್ಮ ಶಿಕ್ಷಕ / ಅಧಿಕಾರಿಯ ಕುರಿತು ಯಾರಿಗೂ ದೂರು ನೀಡಲಾರಿರಿ

ಚರ್ಚೆಯ ಅಂಶಗಳು

- ಈ ವರ್ತನೆಯು ನಿಮ್ಮ ಕೆಲಸದ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ?
- ನಿಮ್ಮ ಮಾನಸಿಕ ಸ್ಥಿತಿ ಹೇಗಿರುವುದು?
- ನಿಮಗೆ ಈ ನಡವಳಿಕೆಯ ಕುರಿತು ಯಾರೊಂದಿಗಾದರೂ ಹೇಳಲು ಸಾಧ್ಯವಾದರೆ ಏನು ಹೇಳುವಿರಿ?
- ದೈಹಿಕ ಹಿಂಸೆ ಆಗಿಲ್ಲವಾದ್ದರಿಂದ ಅದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ನೀವು ಯೋಚಿಸುತ್ತೀರಾ?
- ಈ ಪರಿಸ್ಥಿತಿಯಲ್ಲಿ ನೀವು ದೋಷಿಯೇ? ಏನು ನಡೆಯುತ್ತಿದೆಯೆಂಬುದನ್ನು ನೀವು ಹೇಗೆ ವಿವರಿಸಬಲ್ಲಿರಿ?

ಕೌಟುಂಬಿಕ ದೌರ್ಜನ್ಯದ ಸಂದರ್ಭದಲ್ಲಿ ಚರ್ಚೆ

- ಶಿಕ್ಷಕ/ಅಧಿಕಾರಿ ಪತಿ ಮತ್ತು ನೀವು ಪತ್ನಿ ಎಂದು ಕಲ್ಪಿಸಿಕೊಳ್ಳಿರಿ. ಪ್ರಶ್ನೆ ಬದಲಾಗಿದೆಯೇ? ಪತ್ನಿ ಈಗ ಮಾನಸಿಕ ಆಘಾತಕ್ಕೆ ಅರ್ಹರಾಗಿದ್ದಾರೆಯೇ?
- ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಲು ಪತ್ನಿಗೆ ಇಲ್ಲದಂತಹ ಯಾವ ಆಯ್ಕೆ ನಿಮ್ಮಲ್ಲಿತ್ತು?
- ಆಕೆ ಈ ಮಾನಸಿಕ ಆಘಾತದ ಕುರಿತು ಯಾರೊಂದಿಗಾದರೂ ಚರ್ಚಿಸಲು ಯತ್ನಿಸಿದರೆ ಆಕೆಯನ್ನು ಗಂಭೀರವಾಗಿ ತೆಗೆದುಕೊಳ್ಳುವ ಸಂಭವ ಇದೆಯೇ ?
- ಮಾನಸಿಕ ಹಿಂಸೆಯು ನಿಜವಾದ ಹಿಂಸೆ ಎಂದು ನಾವು (ಒಂದು ಸಮಾಜವಾಗಿ) ಒಪ್ಪುತ್ತೇವೆಯೇ? ಅದು ಹಿಂಸೆಯೇ?
- ಓರ್ವ ವ್ಯಕ್ತಿಯು ಮಾನಸಿಕ ಮತ್ತು ಭಾವನಾತ್ಮಕ ಹಿಂಸೆಯನ್ನು ಹೇಗೆ ಎದುರಿಸುತ್ತಾನೆ?

ಹಿಂಸಾಕೃತ್ಯ	ಹಿಂಸೆ ಎಸಗುವವ	ಲಕ್ಷ್ಯ	ಹಿಂಸೆಯ ನಮೂನೆ

ವಿಧಿ 1	ಸಮಾನತೆಯ ಹಕ್ಕು
ವಿಧಿ 2	ತಾರತಮ್ಯಕ್ಕೊಳಗಾಗದಿರುವ ಸ್ವಾತಂತ್ರ್ಯ
ವಿಧಿ 3	ಜೀವನ, ಸ್ವಾತಂತ್ರ್ಯ, ವೈಯಕ್ತಿಕ ಭದ್ರತೆಯ ಹಕ್ಕು
ವಿಧಿ 4	ದಾಸ್ಯಕ್ಕೊಳಗಾಗದಿರುವ ಸ್ವಾತಂತ್ರ್ಯ
ವಿಧಿ 5	ಚಿತ್ರಹಿಂಸೆಗೆ ಮತ್ತು ಅವಮಾನಕರ ನಡವಳಿಕೆಗೆ ಗುರಿಯಾಗದಿರುವ ಸ್ವಾತಂತ್ರ್ಯ
ವಿಧಿ 6	ಕಾನೂನಿನೆದುರು ಓರ್ವ ವ್ಯಕ್ತಿಯೆಂದು ಮನ್ನಿಸಲ್ಪಡುವ ಹಕ್ಕು
ವಿಧಿ 7	ಕಾನೂನಿನೆದುರು ಸಮಾನತೆಯ ಹಕ್ಕು
ವಿಧಿ 8	ಯೋಗ್ಯ ನ್ಯಾಯಮಂಡಲಿಯಿಂದ ಪರಿಹಾರ ಪಡೆಯುವ ಹಕ್ಕು
ವಿಧಿ 9	ಇಚ್ಛಾನುಸಾರ ಬಂಧನ ಮತ್ತು ಗಡೀಪಾರಿಗೆ ಒಳಗಾಗದಿರುವ ಹಕ್ಕು
ವಿಧಿ 10	ನ್ಯಾಯಬದ್ಧವಾದ ಬಹಿರಂಗ ವಿಚಾರಣೆಗೆ ಒಳಗಾಗುವ ಹಕ್ಕು
ವಿಧಿ 11	ಅಪರಾಧ ಸಾಬೀತಾಗುವ ತನಕ ನಿರಪರಾಧಿಯೆಂದು ಪರಿಗಣಿಸಲ್ಪಡುವ ಹಕ್ಕು
ವಿಧಿ 12	ಏಕಾಂತ, ಕುಟುಂಬ, ಮನೆ ಮತ್ತು ಪತ್ರ ವ್ಯವಹಾರದಲ್ಲಿ ಹಸ್ತಕ್ಷೇಪಕ್ಕೆ ಒಳಗಾಗದಿರುವ ಸ್ವಾತಂತ್ರ್ಯ
ವಿಧಿ 13	ದೇಶದ ಒಳಗೆ ಮತ್ತು ಹೊರಗೆ ಮುಕ್ತವಾಗಿ ಸಂಚರಿಸುವ ಹಕ್ಕು
ವಿಧಿ 14	ಪೀಡನೆಗೆ ಗುರಿಯಾದ ಸಂದರ್ಭಗಳಲ್ಲಿ ಅನ್ಯ ದೇಶಗಳಲ್ಲಿ ಆಶ್ರಯ ಪಡೆಯುವ ಹಕ್ಕು
ವಿಧಿ 15	ರಾಷ್ಟ್ರೀಯತೆಯ ಅಧಿಕಾರ ಮತ್ತು ಅದನ್ನು ಬದಲಾಯಿಸುವ ಸ್ವಾತಂತ್ರ್ಯ
ವಿಧಿ 16	ಮದುವೆಯಾಗುವ ಮತ್ತು ಕುಟುಂಬವನ್ನು ಹೊಂದುವ ಹಕ್ಕು
ವಿಧಿ 17	ಆಸ್ತಿಯ ಒಡೆತನವನ್ನು ಹೊಂದುವ ಹಕ್ಕು
ವಿಧಿ 18	ನಂಬಿಕೆ ಮತ್ತು ಮತಾಚರಣೆಯ ಸ್ವಾತಂತ್ರ್ಯ
ವಿಧಿ 19	ಅಭಿಪ್ರಾಯ ಮತ್ತು ಮಾಹಿತಿ ಸ್ವಾತಂತ್ರ್ಯ.
ವಿಧಿ 20	ಶಾಂತವಾಗಿ ಸಭೆ ಸೇರುವ ಹಾಗೂ ಸಂಘಟಿಸುವ ಹಕ್ಕು
ವಿಧಿ 21	ಸರಕಾರದಲ್ಲಿ ಮತ್ತು ಮುಕ್ತ ಚುನಾವಣೆಯಲ್ಲಿ ಭಾಗವಹಿಸುವ ಹಕ್ಕು
ವಿಧಿ 22	ಸಾಮಾಜಿಕ ಭದ್ರತಾ ಹಕ್ಕು
ವಿಧಿ 23	ಅಪೇಕ್ಷಣೀಯ ಕೆಲಸ ಮಾಡುವ ಹಾಗೂ ಕಾರ್ಮಿಕ ಸಂಘಟನೆಗಳಿಗೆ ಸೇರುವ ಹಕ್ಕು
ವಿಧಿ 24	ವಿಶ್ರಾಂತಿ ಮತ್ತು ಬಿಡುವನ್ನು ಹೊಂದುವ ಹಕ್ಕು
ವಿಧಿ 25	ಪರ್ಯಾಪ್ತ ಜೀವನ ಮಟ್ಟವನ್ನು ಹೊಂದುವ ಹಕ್ಕು
ವಿಧಿ 26	ಶಿಕ್ಷಣ ಪಡೆಯುವ ಹಕ್ಕು
ವಿಧಿ 27	ಸಮುದಾಯದ ಸಾಂಸ್ಕೃತಿಕ ಜೀವನದಲ್ಲಿ ಪಾಲುಗೊಳ್ಳುವ ಹಕ್ಕು
ವಿಧಿ 28	ಈ ದಾಖಲೆಯನ್ನು ಘೋಷಿಸುವ ಸಾಮಾಜಿಕ ವ್ಯವಸ್ಥೆಯಲ್ಲಿ ಪಾಲುಗೊಳ್ಳುವ ಹಕ್ಕು
ವಿಧಿ 29	ಮುಕ್ತ ಹಾಗೂ ಸಂಪೂರ್ಣ ಅಭಿವೃದ್ಧಿಗೆ ಅವಶ್ಯವಾಗಿರುವ ಸಮುದಾಯ ಕರ್ತವ್ಯಗಳು
ವಿಧಿ 30	ಮೇಲಿನ ಹಕ್ಕುಗಳಲ್ಲಿ ಸರಕಾರದ ಅಥವಾ ವೈಯಕ್ತಿಕ ಹಸ್ತಕ್ಷೇಪಕ್ಕೆ ಗುರಿಯಾಗದಿರುವ ಸ್ವಾತಂತ್ರ್ಯ

ಘಟನೆ	ಹಿಂಸೆಯ ಬಗೆ	ಹಕ್ಕಿನ ಉಲ್ಲಂಘನೆಯಾಗುತ್ತಿರುವುದು

ಹಿಂಸೆಯನ್ನು ಕೊನೆಗೊಳಿಸಲು ಪುರುಷರ* ಪ್ರತಿಜ್ಞೆ

ಏಕೆಂದರೆ :

- ಪುರುಷರು ಪರಿಹಾರದ ಭಾಗವಾಗುವ ತನಕ ಹಿಂಸೆಯು ಮುಕ್ತಾಯಗೊಳ್ಳದೆಂದು ನಾನು ನಂಬಿದ್ದೇನೆ.
- ನಾನು ಪುರುಷನಾಗಿರುವುದಕ್ಕೆ ನನ್ನ ಕುರಿತು ಹೆಮ್ಮೆ ಪಡುತ್ತೇನೆ.
- ನನ್ನ ಜೀವನದಲ್ಲಿ ಮಹಿಳೆಯರ ಬಗ್ಗೆ ಕಾಳಜಿ ವಹಿಸುತ್ತೇನೆ.
- ನನಗೆ ಗೊತ್ತಿರುವವರಿಗೆ ನೋವಾಗಿದೆಯೆಂದು ಕೋಪಗೊಂಡಿದ್ದೇನೆ.
- ಈ ದೇಶದಲ್ಲಿ ಪ್ರತಿ ..... ನಿಮಿಷಗಳಿಗೊಮ್ಮೆ ಓರ್ವ ಹೆಂಗಸು ಹಿಂಸೆಗೆ ಗುರಿಯಾಗುತಿದ್ದಾರೆಂಬುದನ್ನು ನಾನು ಬಲ್ಲೆನು
- ನಾನು ಮಹಿಳೆಯರ ಸಂಘಟನೆಗಳ ವಿರುದ್ಧ ಹಿಂಸೆಯನ್ನು, ಮಹಿಳೆಯರ ಭಾವನಾತ್ಮಕ ಸ್ವಾಸ್ಥ್ಯವನ್ನು ಹಾಗೂ ಮಹಿಳೆಯರಿಗೆ ತಮ್ಮ ಆಯ್ಕೆಯ ಸಂಘಟನೆಗಳಲ್ಲಿ ದುಡಿಯುವ ಅಧಿಕಾರವನ್ನು ಅರ್ಥಮಾಡಿಕೊಂಡಿದ್ದೇನೆ.
- ಸ್ತ್ರೀಯರ ವಿರುದ್ಧ ಹಿಂಸೆಯು ನಿಲ್ಲುವ ತನಕ ಸ್ತ್ರೀಯರು ಮತ್ತು ಪುರುಷರು ಸಮಾನರಾಗಲಾರದೆಂಬುದನ್ನು ನಾನು ಒಪ್ಪುತ್ತೇನೆ.
- ಹಿಂಸೆಯು ಇರುವಂತಹ ಜಗತ್ತಿನಲ್ಲಿ ಸ್ತ್ರೀಯರು ಮತ್ತು ಪುರುಷರ ನಡುವೆ ಸಂತೋಷವು ಕಷ್ಟವೆಂಬುದು ನನಗೆ ಗೊತ್ತಿದೆ.
- ಇದನ್ನು ಸುರಕ್ಷಿತ ಜಗತ್ತನ್ನಾಗಿ ಮಾಡಲು ಸಹಾಯ ಮಾಡುವುದು ನನ್ನ ಕರ್ತವ್ಯವೆಂಬುದನ್ನು ಒಪ್ಪಿಕೊಳ್ಳುತ್ತೇನೆ.

ನಾನು ಪ್ರತಿಜ್ಞೆ ಮಾಡುತ್ತೇನೆ:

- ಹಿಂಸೆಯ ಕುರಿತು ನನ್ನ ಕೋಪವನ್ನು ಪ್ರಕಟಿಸುತ್ತೇನೆ
- ಹಿಂಸೆಯ ಕುರಿತು ಇತರ ಗಂಡಸರೊಂದಿಗೆ ಮಾತಾಡುತ್ತೇನೆ.
- ಹಿಂಸೆಯು ಸಾಧ್ಯವಿರುವಂತಹ ಸಂಸ್ಕೃತಿಯನ್ನು ನಿರ್ಮಿಸಲು ಸಹಾಯವಾಗುವ ರೀತಿಯಲ್ಲಿ ಗಂಡಸರನ್ನು ಹೇಗೆ ಬೆಳಸಲಾಗುತ್ತಿದೆಯೆಂದು ಗಮನಿಸುತ್ತೇನೆ.
- "ಹಿಂಸಾ" ಹಾಸ್ಯೋಕ್ತಿಗಳಿಗೆ ತಡೆಯೊಡ್ಡುತ್ತೇನೆ.
- ಹಿಂಸೆಯನ್ನು ಕೊನೆಗೊಳಿಸುವ ಹೊಣೆಗಾರಿಕೆಯನ್ನು ವಹಿಸಿಕೊಳ್ಳುವಂತೆ ಪುರುಷರನ್ನು ಪ್ರೋತ್ಸಾಹಿಸುವ ಕಾನೂನುಗಳನ್ನು ಬೆಂಬಲಿಸುತ್ತೇನೆ.- ಮಹಿಳಾ ಮಿತ್ರರ ಮಾತುಗಳನ್ನು, ತಮ್ಮ ಭದ್ರತೆಯ ಕುರಿತು ಅವರ ಭೀತಿ ಹಾಗೂ ಕಳವಳವನ್ನು ಆಲಿಸುತ್ತೇನೆ.
- ಸಹಾಯಕ್ಕಾಗಿ ಕೂಗುವವರತ್ತ ಲಕ್ಷ್ಯ ಹರಿಸುತ್ತೇನೆ.
- ಜಾಹೀರಾತಿನಲ್ಲಿ ಮಹಿಳೆಯರ ವಿರುದ್ಧ ಹಿಂಸೆಯ ಚಿತ್ರಗಳನ್ನು ಮತ್ತು ಅಶ್ಲೀಲ ಸಾಹಿತ್ಯದ ವಿರುದ್ಧ ಸವಾಲು ನೀಡುತ್ತೇನೆ.
- ದೃಢ ಹಾಗೂ ಶಕ್ತಿಶಾಲಿಯಾಗಿರಲು ಮಹಿಳೆಯರನ್ನು ಪ್ರೋತ್ಸಾಹಿಸುತ್ತೇನೆ.
- ಸಹಕಾರವೇ ಶಕ್ತಿಯೆಂಬುದನ್ನು ಮನ್ನಿಸುತ್ತೇನೆ.
- ಹಿಂಸೆಯು ಸಾಧ್ಯವಾಗಿರುವಂತಹ ಸಂಸ್ಕೃತಿಯನ್ನು ನಿರ್ಮಿಸಲು ಸಹಾಯಕವಾಗಿ ನಾನು ಮಾಡುವುದೆಲ್ಲವನ್ನೂ ಬದಲಾಯಿಸುತ್ತೇನೆ.
- ಹಿಂಸೆಯನ್ನು ಮುಕ್ತಾಯಗೊಳಿಸಲು ಶ್ರಮಿಸುತ್ತಿರುವ ಸ್ತ್ರೀಯರನ್ನು ಮತ್ತು ಪುರುಷರನ್ನು ಬೆಂಬಲಿಸುತ್ತೇನೆ.

ನಾನು, _____, ಹಿಂಸೆಯನ್ನು ಮುಕ್ತಾಯಗೊಳಿಸಲು ನನ್ನ ಶಕ್ತ್ಯನುಸಾರ ಎಲ್ಲವನ್ನೂ ಮಾಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ.

ಸಹಿ _____ ದಿನಾಂಕ _____

ಸಾಕ್ಷಿ (ಸಹಪಾಠಿ/ಅಧ್ಯಾಪಕ/ಮಿತ್ರ/ಸೋದರಿ/ಸೋದರ) _____

* ಈ ಪ್ರತಿಜ್ಞೆಯನ್ನು ಹುಡುಗರೊಂದಿಗೆ ಕೆಲಸ ಮಾಡುವಾಗ ಉಪಯೋಗಿಸಬಹುದು. ಇದರ ಬದಲಾಗಿ ಈ ವಿಭಾಗದಲ್ಲಿ ಲಭ್ಯವಾಗಿರುವ ಮಿತ್ರ ಪ್ರತಿಜ್ಞೆಯನ್ನು ಉಪಯೋಗಿಸಬಹುದು. ಈ ಪ್ರತಿಜ್ಞೆಗಳನ್ನು ಸಹಿ ಚಳವಳಿಯಾಗಿಯೂ ರೂಪಿಸಬಹುದು. ಅದನ್ನು ಭಾರತದಲ್ಲಿ ಕೌಟುಂಬಿಕ ದೌರ್ಜನ್ಯದ ಕುರಿತು ಅಭಿಯಾನಕ್ಕೆ ಪೂರಕವಾಗಿ ಬಳಸಬಹುದು (ಕ್ಯಾಲಿಫೋರ್ನಿಯಾ ಆಂಟಿ ಸೆಕ್ಸಿಸ್ಟ್ ಮೆನ್ಸ್ ಪೊಲಿಟಿಕಲ್ ಕಾಕಸ್ ನೀಡಿದ ಹೇಳಿಕೆಯಿಂದ ತೆಗೆದುಕೊಳ್ಳಲಾಗಿದೆ.)

ಮಿತ್ರ ಪ್ರತಿಜ್ಞೆ*

ಮಿತ್ರನ ಐದು ಗುಣಗಳು:

1. ಮಿತ್ರನು ಆಲಿಸುತ್ತಾನೆ.

   ಯಾವ ವ್ಯಕ್ತಿಗೆ ಸಹಾಯವು ಅವಶ್ಯವಾಗಿದೆಯೋ ಆ ವ್ಯಕ್ತಿಯು ಹೇಳುವುದರತ್ತ ಲಕ್ಷ್ಯ ಹರಿಸಲು, ನಂಬಲು ಮತ್ತು ಗೌರವಿಸಲು

2. ಮಿತ್ರನು ಹಾಜರಿದ್ದಾನೆ.

   ಆ ವ್ಯಕ್ತಿಯನ್ನು ಬೆಂಬಲಿಸಲು - ಗೆಳೆಯನಾಗುವ ಮೂಲಕ, ನಿಮ್ಮ ಮಾತನ್ನು ಉಳಿಸಿಕೊಳ್ಳುವ ಮೂಲಕ ಮತ್ತು ನಿಮಗೆ ಅಲ್ಲಿರಲು ಸಾಧ್ಯವಾಗದಾಗ ಅದನ್ನು ಆ ವ್ಯಕ್ತಿಗೆ ತಿಳಿಸುವ ಮೂಲಕ

3. ಮಿತ್ರನು ಬಾಗಿಲು ತೆರೆಯುತ್ತಾನೆ.

   ಆ ವ್ಯಕ್ತಿಗೆ ಲಭ್ಯವಿರುವ ಅವಕಾಶಗಳನ್ನು, ಸಂಪನ್ಮೂಲಗಳನ್ನು ಮತ್ತು ಬೆಂಬಲವನ್ನು ಅನ್ವೇಷಿಸಲು ಸಹಾಯ ಮಾಡಲು, ಉಪಯಕ್ತ ಮಾಹಿತಿಯನ್ನು ಒದಗಿಸಲು ಮತ್ತು ನಿಮ್ಮ ಸಂಪನ್ಮೂಲಗಳನ್ನು ಹಾಗೂ ಸಂಪರ್ಕಗಳನ್ನು ಹಂಚಿಕೊಳ್ಳಲು.

4. ಮಿತ್ರನು ಅವಕಾಶಗಳನ್ನು ತೆಗೆದುಕೊಳ್ಳುತ್ತಾನೆ.

   ಕೆಲವೊಮ್ಮೆ ನಾವು ತಪ್ಪು ಮಾಡಬಹುದೆಂಬ ಅಥವಾ ಏನಾದರೂ ತಪ್ಪು ವಿಚಾರವನ್ನು ಹೇಳಬಹುದೆಂಬ ಭಯದಿಂದ ಕ್ರಮಕ್ಕೆಗೊಳ್ಳುವುದಿಲ್ಲ. ಸಮಸ್ಯೆಯುಂಟಾದಾಗ ನಾವು ಅದನ್ನು ಸರಿಪಡಿಸಿ ಪುನಃ ಪ್ರಯತ್ನಿಸುತ್ತೇವೆ. ಅವಕಾಶಗಳನ್ನು ಉಪಯೋಗಿಸಿಕೊಂಡು ಕ್ರಮಕ್ಕೆಗೊಳ್ಳುವುದು ಯಾವಾಗಲೂ ಮುಖ್ಯವಾಗಿದೆ.

5. ಮಿತ್ರನು ಯಾವಾಗಲೂ ಬೆಂಬಲ ಪಡೆಯುತ್ತಾನೆ.

   ನೀವು ಯಾರಿಗಾದರೂ ಸಹಾಯ ಮಾಡುವಾಗ ನೆನಪಿನಿಂದ ನಿಮ್ಮ ಬಗ್ಗೆ ಎಚ್ಚರವಹಿಸಿಕೊಳ್ಳಿರಿ. ಅದನ್ನು ಒಂಟಿಯಾಗಿ ಮಾಡಬೇಡಿರಿ.

ಎಲ್ಲಕ್ಕಿಂತ ಹೆಚ್ಚಾಗಿ ಓರ್ವ ಮಿತ್ರನು ಶಾಂತಿ ಸ್ಥಾಪಕನಾಗಿದ್ದಾನೆ.

ಮಿತ್ರ ಪ್ರತಿಜ್ಞೆ

ನಾನು ಸ್ವತಃ ನನಗೆ, ನನ್ನ ಮಿತ್ರರಿಗೆ , ನನ್ನ ಕುಟುಂಬಕ್ಕೆ, ನನ್ನ ಪ್ರೇಮಿಗೆ ಅಥವಾ ಬೇರೆ ಯಾರಿಗೂ ಹಿಂಸೆ ನೀಡುವುದಿಲ್ಲವೆಂದು ಪ್ರತಿಜ್ಞೆ ಮಾಡುತ್ತೇನೆ. ನಾನು ಅನ್ಯರನ್ನು ಸಮರ್ಥಿಸುತ್ತೇನೆ ಹಾಗೂ ಶಾಂತಿಯನ್ನು ನಿರ್ಮಿಸುತ್ತೇನೆ.

ಸಹಿ _____

Kivel, Paul, and Allan Creighton. "Making the Peace," Oakland Men's Project. Alameda: Hunter House, 1997